### ಅಧ್ಯಾಯ 22

# ಅಬ್ರಹಾಮನ ನಂಬಿಕೆಯು ಪರೀಕ್ಷಿಸಲ್ಪಟ್ಟಿದ್ದು

ಅಧ್ಯಾಯ 22ರಲ್ಲಿ ಬರೆಯಲ್ಪಟ್ಟಿರುವ ಪ್ರಮುಖ ಘಟನಾವಳಿಯು ಹಳೆಯ ಒಡಂಬಡಿಕೆಯಲ್ಲಿಯೇ ಅತ್ಯಂಥ ಪರಿಚಿತವಾಗಿರುವಂಥದ್ದರಲ್ಲಿ ಒಂದಾಗಿದೆ. ಹೇಗೂ, ಇದು ವಾಚಕರಿಗೆ ಅರ್ಥಮಾಡಿಕೊಳ್ಳಲು ಅತ್ಯಂಥ ಕಷ್ಟಕರವಾದದ್ದರಲ್ಲಿ ಒಂದು ಸಹ ಆಗಿರುತ್ತದೆ. ಅಬ್ರಹಾಮನು ಅಂತಿಮವಾಗಿ ಬಹಳ ಕಾಲದಿಂದ ಕಾಯುತ್ತಲಿದ್ದ ವಾಗ್ದಾನದ ಮಗನಾದ ಇಸಾಕನನ್ನು ಪಡೆದುಕೊಂಡಿದ್ದನು. ತರುವಾಯ, ನಂಬಿಕೆಯ ಒಂದು ಪರೀಕ್ಷೆಯಲ್ಲಿ, ಆತನನ್ನು ಪುನಃ ದೇವರಿಗೆ ಹಿಂದಿರುಗಿಸಬೇಕೆಂದು ಅವನಿಗೆ ಹೇಳಲ್ಪಟ್ಟಿತು. ಅಬ್ರಹಾಮನು ಪರೀಕ್ಷೆಯಲ್ಲಿ ತೇರ್ಗಡೆಯಾದನು, ಮತ್ತು ಆ ಹುಡುಗನ ಪ್ರಾಣವನ್ನು ತೆಗೆಯುವದರಿಂದ ದೇವರು ಅವನನ್ನು ತಡೆದನು (22:1-14). ಅಬ್ರಹಾಮನು ಅನೇಕ ಸಂತತಿಯವರನ್ನು ಕೊಡಲ್ಪಟ್ಟು ಆಶೀರ್ವದಿಸಲ್ಪಡುವನು (22:15-19) ಎಂಬ ವಾಗ್ದಾನವು ನವೀಕರಿಸಲ್ಪಡುವದರೊಂದಿಗೆ ಮತ್ತು ಅವನ ತಮ್ಮನಾದ ನಾಹೋರನ ವಂಶದ ಕುರಿತು ಒಂದು ಟಿಪ್ಪಣಿಯು ಕೊಡಲ್ಪಡುವದರೊಂದಿಗೆ ಈ ಅಧ್ಯಾಯವು ಮುಕ್ತಾಯಗೊಳ್ಳುತ್ತದೆ (22:20-24).

## ಅಬ್ರಹಾಮನ ನಂಬಿಗಸ್ತಿಕೆ ಮತ್ತು ಆತನ ಮಗನಾದ ಇಸಾಕನನ್ನು ಯಜ್ಞವಾಗಿ ಅರ್ಪಿಸುವಂತೆ ಕರೆ ಕೊಡಲ್ಪಟ್ಟಿದ್ದು (22:1-14)

### ಇಸಾಕನನ್ನು ಯಜ್ಞ ಮಾಡುವಂತೆ ಕರೆ ನೀಡಿದ್ದು (22:1-8)

**[1]ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರಿಶೋಧಿಸಿದನು. ಹೇಗಂದರೆ
ಆತನು ಅವನನ್ನು - ಅಬ್ರಹಾಮನೇ ಎಂದು ಕರೆಯಲು ಅವನು - ಇಗೋ, ಇದ್ದೇನೆ ಅಂದನು.
[2]ಆಗಲಾತನು - ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು
ಮೊರೀಯ ದೇಶಕ್ಕೆ ಹೋಗಿ ಅಲ್ಲಿ ಅವನನ್ನು ನಾನು ಹೇಳುವ ಒಂದು ಬೆಟ್ಟದ ಮೇಲೆ
ಸರ್ವಾಂಗಹೋಮವಾಗಿ ಅರ್ಪಿಸಬೇಕು ಅಂದನು. [3]ಬೆಳಿಗ್ಗೆ ಅಬ್ರಹಾಮನು ಎದ್ದು ಕತ್ತೆಗೆ
ತಡಿಹಾಕಿಸಿ ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ಒಡಿಸಿ ತನ್ನ ಸೇವಕರಲ್ಲಿ ಇಬ್ಬರನ್ನೂ ತನ್ನ
ಮಗನಾದ ಇಸಾಕನನ್ನೂ ಕರೆದುಕೊಂಡು ದೇವರು ಹೇಳಿದ ಸ್ಥಳಕ್ಕೆ ಹೊರಟನು. [4]ಮೂರನೆಯ
ದಿನದಲ್ಲಿ ಅಬ್ರಹಾಮನು ಕಣ್ಣೆತ್ತಿ ನೋಡುವಾಗ ಆ ಸ್ಥಳವು ದೂರದಲ್ಲಿ ಕಾಣಿಸಲು [5]ಅವನು ತನ್ನ
ಸೇವಕರಿಗೆ - ನೀವು ಇಲ್ಲೇ ಕತ್ತೆಯ ಬಳಿಯಲ್ಲಿರ್ರಿ; ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ
ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ ಎಂದು ಹೇಳಿದನು. [6]ಆಗ**

**ಅಬ್ರಹಾಮನು ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ತನ್ನ ಮಗನಾದ ಇಸಾಕನ ಮೇಲೆ ಹೊರಿಸಿ ತನ್ನ ಕೈಯಲ್ಲೇ ಬೆಂಕಿಯನ್ನೂ ಕತ್ತಿಯನ್ನೂ ತೆಗೆದುಕೊಂಡನಂತರ ಅವರಿಬ್ಬರೂ ಹೊರಟು ಹೋದರು. [7]ಹೋಗುವಾಗ ಇಸಾಕನು ತನ್ನ ತಂದೆಯಾದ ಅಬ್ರಹಾಮನಿಗೆ - ಅಪ್ಪಾ ಎಂದು ಕರೆಯಲು ಅಬ್ರಹಾಮನು - ಏನು ಮಗನೇ ಅಂದನು. ಇಸಾಕನು - ಇಗೋ, ಬೆಂಕಿಯೂ ಕಟ್ಟಿಗೆಯೂ ಉಂಟು; ಆದರೆ ಹೋಮಕ್ಕೆ ಬೇಕಾದ ಕುರಿ ಎಲ್ಲಿ ಎಂದು ಕೇಳಿದ್ದಕ್ಕೆ ಅಬ್ರಹಾಮನು - [8]ಮಗನೇ, ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು ಅಂದನು. ಹೀಗೆ ಅವರಿಬ್ಬರೂ ಹೋದರು.**

ದೇವರು ಒಬ್ಬ ಮನುಷ್ಯನನ್ನು ಯಜ್ಞಮಾಡುವಂತೆ ಅಬ್ರಹಾಮನಿಗೆ ಆಜ್ಞಾಪಿಸುವನು ಎಂಬುದು ಆಧುನಿಕ ವಾಚಕನಿಗೆ ಹೇವರಿಕೆ ಉಂಟು ಮಾಡುವಂಥದ್ದು. ಬಹಳ ಕಾಲದ ವರೆಗೂ ನ್ಯಾಯಯುತವಾದ ಬಾಧ್ಯಸ್ಥನನ್ನು ಪಡೆಯಬೇಕೆಂದು ಕಾದುಕೊಂಡಿದ್ದಂಥ ನಂಬಿಕೆಯ ಮನುಷ್ಯನಾದ ಈತನಿಗೆ ಇಂಥ ಕೆಲಸವನ್ನು ಮಾಡುವಂತೆ ಹೇಳುವುದು ಕ್ರೂರವೆಂದು ಕಾಣಿಸುತ್ತದೆ. ವೃದ್ಧರಾದ ಇಬ್ಬರು ವ್ಯಕ್ತಿಗಳ ಜೀವಿತದಲ್ಲಿ ಮಧ್ಯಪ್ರವೇಶಿಸಿ ಗರ್ಭಧರಿಸುವಂತೆ ಮತ್ತು ಇಸಾಕನಿಗೆ ಜನ್ಮ ಕೊಡುವಂತೆ ಮಾಡಿದ ಒಳ್ಳೇ ದೇವರು, ತನ್ನ ವಾಗ್ದಾನದ ಮಗುವನ್ನು ಕೊಲ್ಲುವಂತೆ ಮೂಲಪಿತೃವಿಗೆ ಹೇಳಲು ಸಾಧ್ಯ?

ಈ ಸಮಯದಲ್ಲಿ, ಅಬ್ರಹಾಮನು ಸ್ವಲ್ಪವೂ ತಡಮಾಡದೆ, ಅಥವಾ ಪ್ರಶ್ನೆಗಳನ್ನು ಕೇಳದೆ ತನ್ನ ಮಗನನ್ನು ಯಜ್ಞವಾಗಿ ಅರ್ಪಿಸಬೇಕೆಂಬ ದೇವರ ಆಜ್ಞೆಗೆ ಅಷ್ಟೊಂದು ತ್ವರಿತವಾಗಿ ವಿಧೇಯನಾಗುವದಕ್ಕೆ ಹೇಗೆ ಸಾಧ್ಯವಾಗಿತ್ತು? ಆತನು ತನ್ನ ಮಗನಾದ ಇಸಾಕನನ್ನು ಬಹಳವಾಗಿ ಪ್ರೀತಿಸುತ್ತಿದ್ದನಾದ್ದರಿಂದ, ಆತನು ಲೋಟ ಮತ್ತು ಸೊದೋಮ ಹಾಗೂ ಗೊಮೋರ ಪಟ್ಟಣಗಳ ಬೇರೆ ಜನರ ಪ್ರಾಣಗಳನ್ನು ಉಳಿಸುವಂತೆ ದೇವರನ್ನು ಬೇಡಿಕೊಂಡಿದ್ದ ರೀತಿಯಲ್ಲಿ ಈಗ ಏಕೆ ಮಗನಿಗಾಗಿ ಬೇಡಿಕೊಳ್ಳಲಿಲ್ಲ? ಇವುಗಳು ಕಠಿಣವಾದ ಪ್ರಶ್ನೆಗಳಾಗಿವೆ, ಮತ್ತು ವಾಕ್ಯವು ಇದಕ್ಕೆ ಉತ್ತರಗಳನ್ನು ಒದಗಿಸುವದಿಲ್ಲ. ಹೇಗೂ, ಕಥನವು ಒಂದು ಪರಿಹಾರದ ಸುಳಿವು ನೀಡುವದಿಲ್ಲ, ಮತ್ತು ದೇವರು ವ್ಯಕ್ತಿಗಳನ್ನು ಅಥವಾ ಇಸ್ರಾಯೇಲ್ ಜನಾಂಗವನ್ನು ಪರೀಕ್ಷಿಸುವ ಚಿತ್ರಣವನ್ನು ಕೊಡುವ ಇದೇ ರೀತಿಯ ವಾಕ್ಯಭಾಗಗಳು ಕೆಲವೊಂದು ತಪ್ಪು ಕಲ್ಪನೆಗಳನ್ನು ಸ್ಪಷ್ಟಗೊಳಿಸುತ್ತವೆ. ಅಲ್ಲದೆ, ದೇವರು ಹಾಗೂ ಅಬ್ರಹಾಮ ಇವರಿಬ್ಬರ ಕುರಿತಾದ ಸುಳ್ಳು ಕಲ್ಪನೆಗಳನ್ನು ನಿವಾರಿಸುವದಕ್ಕೆ ಹೊಸ ಒಡಂಬಡಿಕೆಯು ಸ್ವಲ್ಪ ಮಟ್ಟಿಗೆ ಸಹಾಯವನ್ನು ಒದಗಿಸುತ್ತದೆ.

**ವಚನ 1.** ಅಧ್ಯಾಯದ ಆರಂಭದಲ್ಲಿ ಈ ಕೆಳಗಿನ ಪರಿಚಯವು ಇರುತ್ತದೆ: **ಈ ಸಂಗತಿಗಳು ಆದ ಮೇಲೆ.** ಈ ಹಿಂದಿನ ಅಧ್ಯಾಯದಲ್ಲಿ ಬಣ್ಣಿಸಲಾಗಿರುವ ಘಟನೆಗಳಾದ ಬಳಿಕ ಈಗ ಎಷ್ಟು ಕಾಲವಾಗಿತ್ತೆಂಬುದು ನಮಗೆ ತಿಳಿಸಲ್ಪಟ್ಟಿಲ್ಲ; ಆದರೆ ಇಸಾಕನ ಜನನ ಮತ್ತು ಅಬೀಮೆಲೆಕನೊಂದಿಗೆ ನಡೆದ ಸಭೆಯ ಸಮಯದಿಂದ ಇಲ್ಲಿಯ ತನಕ ಒಂದು ಸುದೀರ್ಘವಾದ ಕಾಲವಾಧಿಯು ಗತಿಸಿ ಹೋಗಿತ್ತು. ಇಸಾಕನು ಈ ಹೊತ್ತಿಗೆ ಕನಿಷ್ಠ ಹದಿಹರೆಯದ ಹುಡುಗನಾಗಿದ್ದನು; ಮತ್ತು ದೇವರು **ಅಬ್ರಹಾಮನ** ಸಂಗಡ ಬಹಳ ಕಾಲದಿಂದ ಮಾತಾಡದೆಯೇ ಇರಬಹುದಾಗಿದ್ದರೂ, ಆತನು ದೇವರಿಗೆ ತೋರಿಸಿದ ಪ್ರತಿಕ್ರಿಯೆಯು ತ್ವರಿತವಾಗಿತ್ತು: **ಇಗೋ, ಇದ್ದೇನೆ.**

ಕಥನವು ಬಳಿಕ ಆಜ್ಞೆಯ ಉದ್ದೇಶವೇನೆಂಬುದನ್ನು ತಿಳಿಸುತ್ತದೆ: **ದೇವರು ಅಬ್ರಹಾಮನನ್ನು ಪರಿಶೋಧಿಸಿದನು.** ಆ ಹೇಳಿಕೆಯು ಕೆಲವರಿಗೆ ಒಗಟಿನಂತಿರುತ್ತದೆ ಯಾಕೆಂದರೆ KJVಯು ಇಬ್ರಿಯ ಪದವಾದ נִסָּה *(ನಸಾಹ)* ಎಂಬುದನ್ನು, ಈ ವಚನ ಹಾಗೂ

ಬೇರೊಂದು ಕಡೆಯಲ್ಲಿ "ಶೋಧಿಸು" ಎಂಬುದಾಗಿ ಅನುವಾದಿಸುತ್ತದೆ. ಈ ಅನುವಾದವು ತಕ್ಷಣವೇ ದೇವರು ಪಾಪ ಮಾಡುವಂತೆ ಅಬ್ರಹಾಮನನ್ನು ಪ್ರಲೋಭಿಸುತ್ತಿದ್ದನು ಎಂಬ ಅನಿಸಿಕೆಯನ್ನುಂಟು ಮಾಡುತ್ತದೆ, ಆದಾಗ್ಯೂ ದೇವರು ಪಾಪ ಮಾಡುವಂತೆ ಮನುಷ್ಯನನ್ನು ಎಂದಿಗೂ ಪ್ರೇರಿಸುವದಿಲ್ಲ ಎಂಬುದಾಗಿ ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ (ಯಾಕೋಬ 1:13). ದೇವರು ಅಬ್ರಹಾಮನನ್ನು ಪರೀಕ್ಷಿಸುವ ಬಗ್ಗೆ ಉಲ್ಲೇಖಿಸುವ ಅದೇ ಇಬ್ರಿಯ ಪದವು ತನ್ನ ಜನರನ್ನು ಪರೀಕ್ಷಿಸುವ ಅಥವಾ ಸಾಭಿತುಪಡಿಸುವದರ ವಿಷಯದಲ್ಲಿ ಸಹ ಬಳಸಲ್ಪಡುತ್ತದೆ (ನೋಡಿರಿ ವಿಮೋಚನಕಾಂಡ 15:25; 16:4; 20:20; ಧರ್ಮೋಪದೇಶಕಾಂಡ 8:16; 13:3; ನ್ಯಾಯಸ್ಥಾಪಕ 2:22; 3:1, 4).

ಅಂಥ ಪರೀಕ್ಷೆಗೆ ಸಂಭಾವ್ಯ ಕಾರಣವು ಅರಸನಾದ ಹಿಜ್ಕೀಯನ ಕುರಿತಾದ ಕಥನದಲ್ಲಿ ಕೊಡಲ್ಪಟ್ಟಿದೆ: ಯೆಹೋವನು "ಅವನನ್ನು ಪರೀಕ್ಷಿಸುವದಕ್ಕೂ ಅವನ ಸರ್ವಾಂತರ್ಯವನ್ನು ತಿಳುಕೊಳ್ಳುವದಕ್ಕೂ ಅವನನ್ನು ಕೈಬಿಟ್ಟನು" (2 ಪೂರ್ವಕಾಲವೃತ್ತಾಂತ 32:31; ನೋಡಿರಿ ಧರ್ಮೋಪದೇಶಕಾಂಡ 8:2; ಕೀರ್ತನೆ 26:2). ಪರೀಕ್ಷಿಸುವ ಮೂಲಕವಾಗಿ, ದೇವರು ತನ್ನ ಜನರಲ್ಲಿದ್ದ ನಿಜವಾದ ಇಂಗಿತಗಳನ್ನು ಮತ್ತು ಉದ್ದೇಶಗಳನ್ನು ಬಯಲಿಗೆ ತಂದನು. ಆ ಪ್ರಕ್ರಿಯೆಯ[1] ಮೂಲಕ, ಆತನು ಅವರೊಳಗೆ ಅಪೇಕ್ಷಣೀಯ ಸ್ವಭಾವದ ಶೀಲತೆಗಳನ್ನು ಮತ್ತು ಗುಣಗಳನ್ನು, ವಿಶೇಷವಾಗಿ ಆಳವಾದ ನಂಬಿಕೆಯನ್ನು ಅಭಿವೃದ್ಧಿಗೊಳಿಸಲು ನಿರೀಕ್ಷಿಸಿದನು. ಅಬ್ರಹಾಮನ ಪ್ರಕರಣದಲ್ಲಿ ನೋಡುವದಾದರೆ, ಇಷ್ಟೆಲ್ಲಾ ವರ್ಷಗಳಾದ ಮೇಲೆ, ಮೂಲಪಿತೃವಿನ ನಂಬಿಕೆ ಮತ್ತು ಗುಣಸ್ವಭಾವವು ಅಂತಿಮ ಪರೀಕ್ಷೆಯಲ್ಲಿ ಬದುಕುಳಿಯುವವೋ ಎಂಬುದನ್ನು ಪರೀಕ್ಷಿಸಿ ನೋಡಲು ಯೆಹೋವನು ಬಯಸಿದನು. ಆತನು ತನ್ನ ಮಾನವ ತರ್ಕವನ್ನು, ಇಸಾಕನ ಮೇಲಿರುವ ತನ್ನ ಪ್ರೀತಿಯನ್ನು ಬದಿಗೊತ್ತುವನೋ, ಮತ್ತು ತನ್ನ ಮಗನಿಗಾಗಿರುವ ತನ್ನೆಲ್ಲಾ ಕನಸುಗಳನ್ನು ಬದುಗೊತ್ತಿ ಎಲ್ಲಕ್ಕಿಂತ ಮೇಲಾಗಿ ದೇವರ ಚಿತ್ತಕ್ಕೆ ಆದ್ಯತೆ ಕೊಡುವನೋ? ಆತನು ಇಸಾಕನನ್ನು ಮಾನವ ಯಜ್ಞವಾಗಿ ಅರ್ಪಿಸುವಷ್ಟರ ಮಟ್ಟಿಗೆ ದೇವರಲ್ಲಿ ವಿಶ್ವಾಸವಿಟ್ಟನೋ (ಇಬ್ರಿಯ 11:17-19)?

**ವಚನ 2.** ಅಬ್ರಹಾಮನಿಗೆ ಕೊಡಲ್ಪಟ್ಟ ದೈವಿಕ ಆಜ್ಞೆಯು ತಾರ್ಕಿಕ ತಿಳುವಳಿಕೆಯನ್ನು ಧಿಕ್ಕರಿಸುವದಾಗಿತ್ತು. ಅದು ಇಸಾಕನನ್ನು ಮೂರು ಸಾರಿ ಉಲ್ಲೇಖಿಸಿದ ಒಂದು ಆಜ್ಞಾರ್ಥಕವನ್ನೊಳಗೊಂಡಿದ್ದು ಅದು ಸಾಮಾನ್ಯವಾದದ್ದರಿಂದ ನಿರ್ದಿಷ್ಟವಾದದ್ದರ ಕಡೆಗೆ ಸಾಗಿದಂತೆ ಇನ್ನಷ್ಟು ತೀಕ್ಷ್ಣಗೊಂಡಿತ್ತು: **ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು**.

ಇಬ್ರಿಯ ಪದ יָחִיד (*ಯಾಚಿಡ್*, "ಒಬ್ಬನೇ") ಎಂಬುದರ ಅಕ್ಷರಶಃ ಅರ್ಥವು ಯಾವದೋ "ವಿಶಿಷ್ಟ ಮತ್ತು ಬೆಲೆ ಕಟ್ಟಲಾಗದ್ದು"[2] ಎಂಬ ಅರ್ಥದಲ್ಲಿ "ಒಬ್ಬನೇ ಒಬ್ಬ, ಅನನ್ಯ" ಎಂದಾಗಿರುತ್ತದೆ. *ಯಾಚಿಡ್* ಎಂಬುದು ಗ್ರೀಕ್ ಭಾಷೆಯ μονογενής *(ಮೊನಿಗೆನೇಸ್)* ಎಂಬುದಕ್ಕೆ ಸಮವಾಗಿರುತ್ತದೆ, ಈ ಪದವು ಇಬ್ರಿಯ 11:17ರಲ್ಲಿ ಇಸಾಕನನ್ನು ಸೂಚಿಸುವದಕ್ಕೆ ಬಳಸಲ್ಪಟ್ಟಿದೆ. ಆ ವಾಕ್ಯದಲ್ಲಿ, NASBಯು ಈ ಪದವನ್ನು "ಏಕಪುತ್ರ" ಎಂಬುದಾಗಿ ಅನುವಾದಿಸುತ್ತದೆ. ಹೇಗೂ, ಈ ಅನುವಾದವು ತಪ್ಪಾಗಿರುತ್ತದೆ, ಲ್ಯಾಟಿನ್ ಭಾಷೆಯ ವುಲ್ಗೇಟನಲ್ಲಿನ (ಕ್ರಿ.ಶ. 395) ಜೆರೋಮನು ಮಾಡಿದ ಅನುವಾದವನ್ನು ಉಳಿಸಿಕೊಂಡಿರುತ್ತದೆ ಮತ್ತು ಅನಂತರದಲ್ಲಿ ಅದನ್ನು KJVಯ ಅನುವಾದಕರು ಅಳವಡಿಸಿಕೊಂಡರು (ಕ್ರಿ.ಶ. 1611). ಇಸಾಕನನ್ನು ಅಕ್ಷರಶಃ "ಏಕಪುತ್ರ" ಎಂದು ಕರೆಯುವುದು ಸರಿಯಾದದ್ದಲ್ಲ, ಯಾಕೆಂದರೆ ಅಬ್ರಹಾಮನಿಗೆ ಇಬ್ಬರು ಪುತ್ರರಿದ್ದರು: ಇಸ್ಮಾಯೇಲ ಮತ್ತು ಇಸಾಕ. ಬದಲಾಗಿ, ಇಸಾಕನು

ಸಂತಾನೋತ್ಪತ್ತಿಯ ವಯಸ್ಸನ್ನು ಮೀರಿದ್ದ ತಂದೆತಾಯಿಗಳಿಗೆ ನೀಡಿದ ವಾಗ್ದಾನದ ನಿಮಿತ್ತವಾಗಿ ಹುಟ್ಟಿದ "ಒಬ್ಬನೇ, ವಿಶಿಷ್ಟ ಮಗ"[3] ಆಗಿದ್ದನು. ಆತನ ಜನನವು ಅದ್ಭುತಕರವಾದ ಜನ್ಮವಾಗಿತ್ತು.

ದೇವರು ದೈವಿಕ ಆಜ್ಞೆಯನ್ನು ಮುಂದುವರೆಸಿದ ಹಾಗೆ, ಆತನು ಅಬ್ರಹಾಮನಿಗೆ ಹೀಗೆ ಅಪ್ಪಣೆ ಕೊಟ್ಟನು, **ಮೊರೀಯ ದೇಶಕ್ಕೆ ಹೋಗಿ ಅಲ್ಲಿ ಅವನನ್ನು ನಾನು ಹೇಳುವ ಒಂದು ಬೆಟ್ಟದ ಮೇಲೆ ಸರ್ವಾಂಗಹೋಮವಾಗಿ ಅರ್ಪಿಸಬೇಕು.** "ಮೋರಿಯ ದೇಶ" ಎಂಬ ನಿರ್ದಿಷ್ಟವಾದ ಪದಗುಚ್ಛವು ಬೈಬಲಿನಲ್ಲಿ ಬೇರೆ ಇನ್ನಾವ ಸ್ಥಳದಲ್ಲಿಯೂ ಕಂಡು ಬರುವದಿಲ್ಲ. ಹಳೆಯ ಒಡಂಬಡಿಕೆಯಲ್ಲಿ ಇನ್ನು ಒಂದೇ ಸಾರಿ ಮೋರಿಯದ ಉಲ್ಲೇಖವು 2 ಪೂರ್ವಕಾಲವೃತ್ತಾಂತ 3:1ರಲ್ಲಿ ಇರುತ್ತದೆ, ಅದು ಹೇಳುವದೇನೆಂದರೆ "ಸೊಲೊಮೋನನು ಯೆರೂಸಲೇಮ್ ಪಟ್ಟಣದೊಳಗೆ ತನ್ನ ತಂದೆಯಾದ ದಾವೀದನಿಗೆ ದೇವದರ್ಶನವುಂಟಾದ ಮೋರೀಯಾ ಗುಡ್ಡದಲ್ಲಿ ಯೆಹೋವನ ಆಲಯವನ್ನು ಕಟ್ಟಿಸ ತೊಡಗಿದನು." ಸ್ಪಷ್ಟವಾಗಿರುವಂತೆ, ಅನಂತರದ ಕಾಲಗಳಲ್ಲಿ, "ಮೋರಿಯ" ಎಂಬ ಪದವು ಒಂದು ಸಾಮಾನ್ಯ ಭೂಪ್ರದೇಶದ ಬದಲಾಗಿ, ಒಂದು ನಿರ್ದಿಷ್ಟವಾದ ಪರ್ವತಕ್ಕೆ - "ಯೆಹೋವನ ಬೆಟ್ಟ" (22:14) - ಅನ್ವಯಿಸುವಂಥದ್ದಾಗಿ ಮಾರ್ಪಟ್ಟಿತ್ತು. ಇಸ್ರಾಯೇಲ್ಯರು ಇಸಾಕನ ಯಜ್ಞ ಮಾಡುವಿಕೆಯು ಸಂಭವಿಸಿದ್ದ ಸ್ಥಳವೆಂದು ನಂಬಿದ್ದ ಯೆರೂಸಲೇಮಿನಲ್ಲಿರುವ ನಿರ್ದಿಷ್ಟವಾದ ಸ್ಥಳಕ್ಕೆ "ಮೋರಿಯ ಬೆಟ್ಟ" ಎಂಬ ಹೆಸರನ್ನು ಕೊಟ್ಟರು. ಈ ಸ್ಥಳದಲ್ಲಿ, ದಾವೀದನು ದೇವರಿಗೆ ಯಜ್ಞಗಳನ್ನು ಅರ್ಪಿಸಿದನು (2 ಸಮುವೇಲ 24:16-25; 1 ಪೂರ್ವಕಾಲವೃತ್ತಾಂತ 21:16-26), ಮತ್ತು ಸೊಲೊಮೋನನು ದೇವಾಲಯ ಕಟ್ಟಿಸಿದನು.[4]

ದೇವರು ಅಬ್ರಹಾಮನಿಗೆ ನೀಡಿದ ಆಜ್ಞೆಯ ಕಠಿಣತೆಯು ಇಸಾಕನನ್ನು "ಸರ್ವಾಂಗಹೋಮ" (עֹלָה, *ಒಲಾಹ)* ಅರ್ಪಿಸತಕ್ಕದ್ದು ಎಂದು ಅಪ್ಪಣೆ ಕೊಟ್ಟದರಲ್ಲಿಯೇ ಕಾಣುತ್ತದೆ. ಅನಂತರದಲ್ಲಿ ಇಸ್ರಾಯೇಲ್ಯರ ಧರ್ಮಶಾಸ್ತ್ರವು ಯಜ್ಞವೇದಿಯ ಮೇಲೆ ಸಂಪೂರ್ಣವಾಗಿ ಸುಟ್ಟು ಕರಗಿಸಲ್ಪಡಬೇಕಾದ (ಪ್ರಾಣಿಯ ತೊಗಲನ್ನು ಹೊರತುಪಡಿಸಿ) ಏಕೈಕ ಯಜ್ಞವು *ಒಲಾಹ* ಮಾತ್ರವೇ ಎಂದು ನೇಮಿಸಲ್ಪಟ್ಟಿತ್ತು.[5] ಇದು ದೇವರಿಗೆ ಇಷ್ಟವಾಗುವಂಥ ಸುವಾಸನೆಯನ್ನು ಉಂಟು ಮಾಡುವದಾಗಿತ್ತು (8:21; ಯಾಜಕಕಾಂಡ 1:9) ಯಾಕೆಂದರೆ ಇದು ಆತನಿಗೋಸ್ಕರ ಸಂಪೂರ್ಣವಾಗಿ ಸಮರ್ಪಿಸಿಕೊಂಡಿರುವ ಜೀವಿತವನ್ನು ಸೂಚಿಸುವದಾಗಿತ್ತು. ಮಾನವ ಯಜ್ಞಗಳು ಯೆಹೋವನಿಗೆ ಅಸಹ್ಯವಾಗಿದ್ದವು ಎಂಬುದರಲ್ಲಿ ಸಮಸ್ಯೆಯು ಉದ್ಭವವಾಗುತ್ತದೆ. ಅನಂತರದಲ್ಲಿ, ಅನ್ಯಧರ್ಮಿಯರು ತಮ್ಮ ದೇವರುಗಳಿಗೆ ಅರ್ಪಿಸುವ ರೀತಿಯಲ್ಲಿ ತನಗೆ ಅವರ ಮಕ್ಕಳನ್ನು ಬಲಿಯಾಗಿ ಕೊಡಬಾರದು ಎಂಬುದಾಗಿ ಆತನು ತನ್ನ ಜನರಿಗೆ ನಿಷೇಧ ಹೇರಿದನು (ಯಾಜಕಕಾಂಡ 18:21; 20:1-5; ಧರ್ಮೋಪದೇಶಕಾಂಡ 12:31; 18:10).

ದೇವರು ಮಾನವ ಬಲಿಗಳನ್ನು ಅಸಹ್ಯಿಸುತ್ತಿದ್ದನೆಂಬದ ಕುರಿತು ಅಬ್ರಹಾಮನಿಗೆ ಎಷ್ಟು ತಿಳಿದಿತ್ತು? ಬೈಬಲಿನ ವಾಕ್ಯಗಳಿಂದ ನಮಗೆ ಇನ್ನೂ ಇದರ ಕುರಿತು ತಿಳಿಸಲ್ಪಟ್ಟಿರುವದಿಲ್ಲ. ಹೇಗೂ, ಇಸಾಕನನ್ನು - ವಾಗ್ದಾನ ಮಗುವನ್ನು - ತೆಗೆದುಕೊಂಡು ಹೋಗಿ ಅವನನ್ನು ಸರ್ವಾಂಗಹೋಮವಾಗಿ ಬೆಂಕಿಗೆ ಒಪ್ಪಿಸು ಎಂಬುದಾಗಿ ಯೆಹೋವನು ನೀಡಿದ ಆಜ್ಞೆಯು, ಬಹುಶಃ ಆತನ ಇರುವಿಕೆಯ ತಳಹದಿಯನ್ನೇ ಅಲುಗಾಡಿಸಿರಬಹುದು. ಇದು ಮೂಲಪಿತೃವಿನ ನಂಬಿಕೆಗೆ ಒಂದು ಅತ್ಯುನ್ನತವಾದ ಪರೀಕ್ಷೆಯಾಗಿ ಮಾರ್ಪಟ್ಟಿತ್ತು.

ಈ ಪ್ರಶ್ನೆಯು ದೇವರ ಸ್ವಭಾವ ಮತ್ತು ಗುಣಶೀಲಗಳನ್ನು ಒಳಗೊಂಡಿತ್ತು. ಇಷ್ಟೆಲ್ಲಾ

ವರ್ಷಗಳ ಬಳಿಕ, ದೇವರು ಒಳ್ಳೆಯವನು ಮತ್ತು ಕೃಪಾಭರಿತನು, ಯಾವದೇ ಕೆಟ್ಟ ಇಂಗಿತಗಳನ್ನು ಹೊಂದಿರದವನು ಎಂಬುದನ್ನು ಅರಿಯುವಷ್ಟರ ಮಟ್ಟಿಗೆ ಅಬ್ರಹಾಮನು ಯೆಹೋವನನ್ನು ಚೆನ್ನಾಗಿ ತಿಳಿದುಕೊಂಡಿದ್ದನು. ಆದದರಿಂದ, ಅಂಥ ಆಜ್ಞೆಗೆ ಕಾರಣವೇನೆಂಬುದು ಅವನಿಗೆ ಅರ್ಥವಾಗಲಿಲ್ಲವಾದರೂ, ದೇವರು ಹೇಗೋ ಎಲ್ಲವನ್ನು ಅನುಕೂಲಕರವಾಗಿ ಮಾಡುವನು ಎಂಬುದಾಗಿ ಆತನು ನಂಬಿರಬಹುದಾಗಿದೆ. ಈ ಸಂದರ್ಭವನ್ನು ನೆನೆಪಿಸಿಕೊಳ್ಳುವವನಾಗಿ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ ಮೂಲಪಿತೃವು ನಂಬಿಕೆಯಿಂದಲೇ ನಡೆದುಕೊಂಡನು, ತಾನು ಮಗನನ್ನು ಕೊಂದರು ಸಹ, ಯೆಹೋವನು ಆತನನ್ನು “ಸತ್ತವರೊಳಗಿಂದ ಜೀವಿತನಾಗಿ” ಬರುವಂತೆ ಮಾಡುವನು ಎಂಬುದಾಗಿ ವಿಶ್ವಾಸಿಸಿದ್ದನು (ಇಬ್ರಿಯ 11:19).

**ವಚನ 3. ಅಬ್ರಹಾಮ**ನು ಆ ರಾತ್ರಿಯಲ್ಲಿ ಏನೇ ಮಾನಸಿಕ ಹೋರಾಟಗಳನ್ನು ಅನುಭಸಿದ್ದರೂ ಸರಿಯೇ, ಆತನು ಅವುಗಳನ್ನು ಇತ್ಯರ್ಥ ಮಾಡಿಕೊಂಡನು. ಆತನು **ಬೆಳಿಗ್ಗೆ ಎದ್ದನು** ಎಂಬುದಾಗಿ ವಾಕ್ಯವು ಹೇಳುತ್ತದೆ. ಈ ಮಾತು ಸೂಚಿಸುವದೇನೆಂದರೆ ಮೂಲಪಿತೃವು ದೈವಿಕ ಅಪ್ಪಣೆಗಳಿಗೆ ತ್ವರಿತವಾಗಿ ಸ್ಪಂದಿಸಿದನು (ನೋಡಿರಿ 19:27; 20:8; 21:14). ದೇವರ ಆಜ್ಞೆಗೆ ವಿಧೇಯನಾಗುವದಕ್ಕೆ ಆತನು ತಡ ಮಾಡಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಆತನು ಸುಮಾರು ಮೂರು ದಿನಗಳ ಪ್ರಯಾಣಕ್ಕಾಗುವಷ್ಟು ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡನು (22:4), ಅದರಲ್ಲಿ **ಕತ್ತೆಗೆ ತಡಿಹಾಕಿಸಿ ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ಒಡಿಸಿ ತನ್ನ ಸೇವಕರಲ್ಲಿ ಇಬ್ಬರನ್ನೂ ತನ್ನ ಮಗನಾದ ಇಸಾಕನನ್ನೂ ಕರೆದುಕೊಂಡು** ಹೋಗುವುದು ಸೇರಿತ್ತು.

**ವಚನ 4.** ಬೇರ್ಷೆಬದಿಂದ ಮೋರಿಯ ಬೆಟ್ಟದ (ಯೆರೂಸಲೇಮ) ಸಾಂಪ್ರದಾಯಿಕ ಸ್ಥಳಕ್ಕೆ ಪ್ರಯಾಣವು ಸುಮಾರು ಐವತ್ತು ಮೈಲಿಗಳಷ್ಟಿತ್ತು, ಮತ್ತು ಅಬ್ರಹಾಮನ ಹೃದಯವು ಈ ಪ್ರಯಾಣದ ವೇಳೆಯಲ್ಲಿ ತನಗೆ ದೇವರು ಮಾಡುವದಕ್ಕೆ ಹೇಳಿರುವ ಸಂಗತಿಯಿಂದಾಗಿ ಭಾರಗೊಂಡಿರಬಹುದು: ಇಸಾಕನನ್ನು ಸರ್ವಾಂಗಹೋಮವಾಗಿ ಅರ್ಪಿಸುವದೇ. ಮೂಲಪಿತೃವಿಗೆ **ಮೂರನೆಯ ದಿನದಲ್ಲಿ ಆ ಸ್ಥಳವು ದೂರದಲ್ಲಿ ಕಾಣಿಸಿತು**.

**ವಚನ 5.** ಹೇಗೂ, ತಾವು ಯಾವ ಕಾರಣಕ್ಕೆ ಬೆಟ್ಟವನ್ನು ಹತ್ತಿ ನಡೆಯುತ್ತಿದ್ದೇವೆ ಎಂಬುದನ್ನು ಆತನು ಇಸಾಕನಿಗೆ ಅಥವಾ ಸೇವಕರಿಗೆ ತಿಳಿಸಲಿಲ್ಲ. ಬದಲಾಗಿ, ತಾನು ಮತ್ತು ಇಸಾಕ ದೇವರು ಹೇಳಿದ್ದ ಸ್ಥಳಕ್ಕೆ ಪ್ರಯಾಣವನ್ನು ಮುಂದುವರೆಸಿದ ವೇಳೆ, **ತನ್ನ ಸೇವಕರಿಗೆ - ನೀವು ಇಲ್ಲೇ ಕತ್ತೆಯ ಬಳಿಯಲ್ಲಿರ್ರಿ** ಎಂದು ಆತನು ಅಪ್ಪಣೆ ಕೊಟ್ಟನು. ಬಳಿಕ ಅಬ್ರಹಾಮನು ಹೀಗೆ ಹೇಳಿದನು, ನಾವು **ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರುತ್ತೇವೆ**. ಈ ಹೇಳಿಕೆಯು ದೇವರಲ್ಲಿ ಅವನಿಗಿದ್ದ ಅಂತಿಮ ವಿಶ್ವಾಸವನ್ನು ತೋರಿಸುತ್ತದೆ. ಯಾವದೋ ವಿಧದಲ್ಲಿ - ಆತನಿಗೆ ನಿಖರವಾಗಿ ಹೇಗೆ ಎಂಬುದು ಗೊತ್ತಿರಲಿಲ್ಲವಾದರೂ - ತಾವಿಬ್ಬರೂ ಹಿಂದಿರುಗಿ ಬರುತ್ತೇವೆ ಎಂಬ ಇಂಗಿತವು ಅವನಿಗಿತ್ತು.

**ವಚನ 6.** ಶಾರೀರಿಕವಾಗಿ ಮತ್ತು ಭಾವನಾತ್ಮಕವಾಗಿ, ತಾವು ಸೇವಕರನ್ನು ಮತ್ತು ಕತ್ತೆಯನ್ನು ಅಲ್ಲಿಯೇ ಬಿಟ್ಟು ಮುಂದುವರೆಸಿದಂತೆ, ಪ್ರಯಾಣದ ಮುಂದಿನ ಹಂತವು ವಯಸ್ಸಾಗಿದ್ದ ಮೂಲಪಿತೃವಿಗೆ ಮತ್ತು ಆತನ ಮಗನಿಗೆ ಅತ್ಯಂಥ ಕಠಿಣದ್ದಾಗಿರಬಹುದು. ಕಥನವು ಹೇಳುವದೇನೆಂದರೆ ಆಗ **ಅಬ್ರಹಾಮನು ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ತನ್ನ ಮಗನಾದ ಇಸಾಕನ ಮೇಲೆ ಹೊರಿಸಿದನು**. ಈ ಹೊತ್ತಿಗೆ ಇಸಾಕನು ಒಬ್ಬ ಹದಿಹರೆಯದವನಾಗಿದ್ದರೂ, ಯಜ್ಞಕ್ಕೆ ಬೇಕಾಗಿದ್ದ ಕಟ್ಟಿಗಳ ಬೃಹತ್ ಮೂಟೆಯನ್ನು

ಹೊತ್ತುಕೊಂಡು ಬೆಟ್ಟವನ್ನು ಹತ್ತಿ ಸಾಗುವುದು ಅವನಿಗೆ ನಿಜಕ್ಕೂ ಬಹಳ ಪ್ರಯಾಸಕರವಾಗಿರಬಹುದು ಎಂಬುದರಲ್ಲಿ ಸಂದೇಹವಿಲ್ಲ. ಒಂದು ಯೆಹೂದಿ ಮಿದ್ರಾಶ್ ಹೇಳುವದೇನೆಂದರೆ, ಇಸಾಕನು ತನ್ನ ಬೆನ್ನಿನ ಮೇಲೆ ಕಟ್ಟಿಗೆಗಳ ಭಾರವನ್ನು ಹೊತ್ತುಕೊಂಡವನಾಗಿ, ಒಂದು ವಿಧದಲ್ಲಿ ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಳ್ಳುವಂತೆ ಒತ್ತಾಯಿಸಲ್ಪಟ್ಟ ಮರಣದಂಡನೆಗೆ ಪಾತ್ರನಾದ ಅಪರಾಧಿಯಂತೆ ಇದ್ದನು.[6] ನಾವು ಅಬ್ರಹಾಮನು ಇಸಾಕನೊಂದಿಗೆ ನಡೆದು ಸಾಗುತ್ತಿದ್ದ ವೇಳೆ ಆತನ ಹೃದಯದಲ್ಲಿದ್ದ ತಳಮಳವನ್ನು ಕೇವಲ ಊಹಿಸಿಕೊಳ್ಳಲು ಮಾತ್ರವೇ ಸಾಧ್ಯ. ಆತನು ಯೆಹೋವನ ಅಪ್ಪಣೆಗಳನ್ನು ನೆರವೇರಿಸುವದಕ್ಕಾಗಿ ಮಗನ ಮೇಲೆ ಬಳಸಲಿದ್ದಂಥ **ತನ್ನ ಕೈಯಲ್ಲೇ ಬೆಂಕಿಯನ್ನೂ ಕತ್ತಿಯನ್ನೂ ತೆಗೆದುಕೊಂಡನು**, ಬಹಳ ಶೀಘ್ರದಲ್ಲಿ ತಾನು ಅವನಿಗೆ ಈ ಪ್ರಯಾಣದ ನಿಜವಾದ ಉದ್ದೇಶವು ಏನೆಂಬುದನ್ನು ವಿವರಿಸಬೇಕಾಗುತ್ತದೆಂದು ಬಲ್ಲವನಾಗಿದ್ದನು.

**ವಚನ 7.** ತಂದೆ ಮತ್ತು ಮಗನು ಒಟ್ಟಿಗೆ ಬೆಟ್ಟವನ್ನು ಹತ್ತಿ ಸಾಗುತ್ತಿರುವ ವೇಳೆ, **ಇಸಾಕನು** ವಿಚಿತ್ರವಾಗಿದ್ದ ಮೌನವನ್ನು ಮುರಿಯುವವನಾಗಿ **ಅಬ್ರಹಾಮನ** ಸಂಗಡ ಮಾತಾಡಿರಬಹುದಾಗಿದೆ. ತಮ್ಮ ಬಳಿಯಲ್ಲಿ ಪ್ರಾಣಿಯನ್ನು ಕೊಂದು ಅದನ್ನು ಯಜ್ಞವೇದಿಯ ಮೇಲೆ ಸುಡುವದಕ್ಕಾಗಿ ಅಗತ್ಯವಿರುವ ವಸ್ತುಗಳೆಲ್ಲಾ ಇದ್ದಾವೆ ಎಂದು ಗುರುತಿಸಿದನು; ಆದರೆ ಆತನು ಹೀಗೆ ಕೇಳಿದನು, **ಇಗೋ, ಬೆಂಕಿಯೂ ಕಟ್ಟಿಗೆಯೂ ಉಂಟು; ಆದರೆ ಹೋಮಕ್ಕೆ ಬೇಕಾದ ಕುರಿ.** ಹುಡುಗನು ತನ್ನ ತಂದೆಯನ್ನು ಸಂಪೂರ್ಣವಾಗಿ ವಿಶ್ವಾಸಿಸುತ್ತಿದ್ದಾನೆ ಎಂದು ಕಾಣಿಸುತ್ತದೆ; ಆದರೆ ಆತನಿಗೆ ಗೊಂದಲವಿತ್ತು, ಯಾಕೆಂದರೆ ಅವರ ಬಳಿಯಲ್ಲಿ ಯಜ್ಞಕ್ಕೆ ಬೇಕಾದ ಪ್ರಾಣಿಯು ಇರಲಿಲ್ಲ. ಮೂಲಪಿತೃವು ಪೂರ್ವಕಲ್ಪನೆಗಳನ್ನು ಮಾಡಿಕೊಳ್ಳುತ್ತಿರುವದಕ್ಕೆ ಮಗನನ್ನು ಗದರಿಸಲಿಲ್ಲ; ಬದಲಾಗಿ, ಸಂಭಾಷಣೆಯು ಅವರಿಬ್ಬರ ಮಧ್ಯದಲ್ಲಿದ್ದ ಆಳವಾದ ಪ್ರೀತಿ ಮತ್ತು ಗೌರವವನ್ನು ದೃಷ್ಟಾಂತಪಡಿಸುತ್ತದೆ. ಇಸಾಕನು ಅವನನ್ನು ಮಮತೆಯಿಂದ **ಅಪ್ಪಾ** ಎಂದು ಕರೆದನು; ಮತ್ತು ಅಬ್ರಹಾಮನು ಪ್ರೀತಿಯಿಂದ ಉತ್ತರಿಸುವವನಾಗಿ, ಅವನನ್ನು **ಮಗನೇ** ಎಂದು ಕರೆದನು.

**ವಚನ 8.** ಇಸಾಕನ ಪ್ರಶ್ನೆಯಿಂದ ಮೂಲಪಿತೃವಿಗೆ ಬೇಸರವಾಯಿತು ಎಂಬ ಯಾವದೇ ಸುಳಿವು ನಮಗೆ ಕಾಣಿಸುವದಿಲ್ಲ, ಅಲ್ಲದೆ ಆತನು ಅವನಿಗೆ ಪ್ರತ್ಯುತ್ತರವನ್ನು ನೀಡುವಾಗ ಒರಟಾಗಿ ಮಾತಾಡಲೂ ಇಲ್ಲ. ಆತನು ನಿಶ್ಚಯವಾಗಿಯೂ ಅಂಥ ಪ್ರಶ್ನೆಯನ್ನು ಎದುರು ನೋಡಿದ್ದನು, ಮತ್ತು ಆತನ ಪ್ರತ್ಯುತ್ತರವು **ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು** ಎಂದಾಗಿತ್ತು. ಸರಳವಾಗಿ ಹೇಳುವದಾದರೆ, ಆರಾಧಕನೇ ಪ್ರಾಣಿಯನ್ನು ಒದಗಿಸುತ್ತಿದ್ದಂಥ ಸಾಮಾನ್ಯವಾಗಿರುತ್ತಿದ್ದ ಯಜ್ಞದ ಕಾಣಿಕೆಗಳಿಗೆ ತದ್ವಿರುದ್ಧವಾಗಿ, ಈ ಸಂದರ್ಭದಲ್ಲಿ, ಅಬ್ರಹಾಮನು ಇಸಾಕನಿಗೆ ದೇವರೇ ಯಜ್ಞಕ್ಕೆ ಬೇಕಾದ ಪ್ರಾಣಿಯನ್ನು ಒದಗಿಸುವನು ಎಂದು ಭರವಸ ಕೊಟ್ಟನು.

## ಇಸಾಕನು ಯಜ್ಞವಾಗಿ ಅರ್ಪಿಸಲ್ಪಟ್ಟಿದ್ದು (22:9-14)

**9ದೇವರು ಹೇಳಿದ ಸ್ಥಳಕ್ಕೆ ಅವರು ಸೇರಿದಾಗ ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ ಕಟ್ಟಿಗೆಯನ್ನು ಒಟ್ಟಿ ತನ್ನ ಮಗನಾದ ಇಸಾಕನ ಕೈಕಾಲುಗಳನ್ನು ಬಿಗಿದು ಅವನನ್ನು ವೇದಿಯಲ್ಲಿ ಕಟ್ಟಿಗೆಯ ಮೇಲೆ ಇಟ್ಟನು. 10ಆದರೆ ತನ್ನ ಮಗನನ್ನು ವಧಿಸುವದಕ್ಕೆ ಅವನು 11ಕೈಚಾಚಿ ಕತ್ತಿಯನ್ನು ಹಿಡಿದುಕೊಳ್ಳಲು ಯೆಹೋವನ ದೂತನು ಆಕಾಶದೊಳಗಿಂದ - ಅಬ್ರಹಾಮನೇ,**

**ಅಬ್ರಹಾಮನೇ ಎಂದು ಅವನನ್ನು ಕರೆದನು. ಅದಕ್ಕೆ ಅಬ್ರಹಾಮನು - ಇಗೋ, ಇದ್ದೇನೆ ಅಂದನು. [12]ಆ ದೂತನು ಅವನಿಗೆ - ನಿನ್ನ ಹುಡುಗನ ಮೇಲೆ ಕೈಹಾಕಬೇಡ, ಅವನಿಗೆ ಏನೂ ಮಾಡಬೇಡ. ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬದು ಈಗ ತೋರಬಂತು ಎಂದು ಹೇಳಿದನು. [13]ಅಬ್ರಹಾಮನು ಕಣ್ಣೆತ್ತಿ ನೋಡುವಾಗ ತನ್ನ ಹಿಂದುಗಡೆ ಒಂದು ಟಗರು ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿತ್ತು. ಅವನು ಹೋಗಿ ಅದನ್ನು ಹಿಡಿದುತಂದು ತನ್ನ ಮಗನಿಗೆ ಬದಲಾಗಿ ಹೋಮಮಾಡಿದನು. [14]ಆ ಸ್ಥಳಕ್ಕೆ ಯೆಹೋವ ಯೀರೆ ಎಂದು ಹೆಸರಿಟ್ಟನು. ಯೆಹೋವನ ಬೆಟ್ಟದಲ್ಲಿ ಒದಗುವದು ಎಂಬದಾಗಿ ಇಂದಿನವರೆಗೂ ಹೇಳುವದುಂಟಲ್ಲಾ.**

**ವಚನ 9. ದೇವರು** ನೇಮಿಸಿದ್ದ **ಸ್ಥಳಕ್ಕೆ** ಅವರು ಬಂದು ಸೇರಿದಾಗ, **ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ ಕಟ್ಟಿಗೆಯನ್ನು ಒಟ್ಟಿದನು**. ಇಸಾಕನು ಬೆಟ್ಟದ ತನಕ ಕಟ್ಟಿಗೆಗಳನ್ನು ಹೊತ್ತುಕೊಂಡು ಬಂದಿದ್ದನಾದ್ದರಿಂದ (22:6), ಆತನು ಇಷ್ಟೊತ್ತಿಗೆ ನೂರಕ್ಕೂ ಅಧಿಕ ವರ್ಷ ವಯಸ್ಸಿನವನಾಗಿದ್ದ ತನ್ನ ವೃದ್ಧ ತಂದೆಗೆ, ಅವನು ಕಲ್ಲುಗಳನ್ನು ಎತ್ತಿ ಯಜ್ಞವೇದಿ ಕಟ್ಟುತ್ತಿರುವ ವೇಳೆ ಸಹಾಯ ಮಾಡಿರಬಹುದು. ಖಂಡಿತವಾಗಿಯೂ, ಈ ಕಥನದ ಮುಖ್ಯ ಒತ್ತು ಅಬ್ರಹಾಮನ ವಿಧೇಯತೆಯುಳ್ಳ ನಂಬಿಕೆ ಮೇಲೆಯೇ ಆಗಿದೆ; ಹೇಗೂ, ಇಸಾಕನಲ್ಲಿ ಸಹಕರಿಸುವ ನಂಬಿಕೆಯಿತ್ತು, ಯಾಕೆಂದರೆ ಆತನು ಹಗ್ಗವನ್ನು ಏಕೆ ಅವಶ್ಯವೆಂದು ಪ್ರಶ್ನಿಸಲಿಲ್ಲ. ಅಷ್ಟುಮಾತ್ರವಲ್ಲದೆ, ಅವನ ತಂದೆಯು ಅವನನ್ನು ಹಗ್ಗದಿಂದ **ಕೈಕಾಲುಗಳನ್ನು ಬಿಗಿದು ಅವನನ್ನು ವೇದಿಯಲ್ಲಿ ಕಟ್ಟಿಗೆಯ ಮೇಲೆ ಇಟ್ಟ** ವೇಳೆ ಪ್ರತಿರೋಧ ವ್ಯಕ್ತಪಡಿಸಲಿಲ್ಲ. ಆತನು ಕಟ್ಟಿಗೆಯನ್ನು ಹೊತ್ತುಕೊಂಡು ಬರುವಷ್ಟು ಬಲಿಷ್ಠನಾಗಿದ್ದರಿಂದ, ಮನಸ್ಸು ಮಾಡಿದ್ದಲ್ಲಿ ಆತನು ತನ್ನನ್ನು ಕಟ್ಟಲು ಅಬ್ರಹಾಮನು ಮಾಡಿದ ಪ್ರಯತ್ನಗಳ ವಿರುದ್ಧವಾಗಿ ಕಾದಾಡಬಹುದಾದಷ್ಟು ದೊಡ್ಡವನು ಮತ್ತು ಶಕ್ತಿಯುಳ್ಳವನು ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಈ ಹಂತದಲ್ಲಿ ತನ್ನ ತಂದೆಯು ಅರ್ಪಿಸಲು ಉದ್ದೇಶಿಸಿರುವ ಯಜ್ಞವು ತಾನೇ ಎಂಬುದನ್ನು ಇಸಾಕನು ಗ್ರಹಿಸಿಕೊಂಡಿದ್ದನು ಮತ್ತು ಬಲಿಯಾಗಲು ಮನಸ್ಸುಳ್ಳವನಾಗಿದ್ದನು ಎಂಬ ಸೂಚ್ಯಾರ್ಥವು ಕಥನದಲ್ಲಿರುತ್ತದೆ.

**ವಚನ 10.** ಅಬ್ರಹಾಮನು **ತನ್ನ ಮಗನನ್ನು ವಧಿಸುವದಕ್ಕೆ ಅವನು ಕೈಚಾಚಿ ಕತ್ತಿಯನ್ನು ಹಿಡಿದುಕೊಳ್ಳುವ** ವೇಳೆ ಅವನ ಹೃದಯವು ವೇದನೆಯಿಂದ ತುಂಬಿರಬಹುದಾಗಿದೆ "ಕೊಲ್ಲಲು" שָׁחַט *(ಶಾಚಾಟ್)* ಎಂಬ ಪದದ ಅರ್ಥವು "ವಧಿಸುವುದು" ಎಂದಾಗಿದೆ. ಈ ಯಜ್ಞಕ್ಕೆ ಬಳಸುವ ಪದವು ಸಾಮಾನ್ಯವಾಗಿ ಯಜ್ಞವೇದಿಯ ಮೇಲೆ ಸುಡಲ್ಪಡಬೇಕಿದ್ದ ಪ್ರಾಣಿಗಳ ಕುತ್ತಿಗೆಗಳನ್ನು ಕೊಯ್ಯುವ ಸಂಗತಿಯನ್ನು ಸೂಚಿಸುತ್ತದೆ (ಯಾಜಕಕಾಂಡ 1:5, 11), ಆದರೆ ಅದು ಪಾಡಂಥ ಮತದ ಆರಾಧನೆಯಲ್ಲಿ ಅನ್ಯಧರ್ಮಿಯ ದೇವರುಗಳಿಗೆ ಮಕ್ಕಳನ್ನ ಬಲಿ ಕೊಡುವದನ್ನು ಸೂಚಿಸಲು ಸಹ ಬಳಸಲ್ಪಡುತ್ತಿತ್ತು (ಯೆಶಾಯ 57:5; ಯೆಹೆಜ್ಕೇಲ 16:21; 23:39).

**ವಚನಗಳು 11, 12.** ಅಬ್ರಹಾಮನು ತನ್ನ ಕತ್ತಿಯನ್ನು ಮಗನ ಮೇಲೆ ಹಾಕುವದಕ್ಕೆ ಮುಂಚೆಯೇ, **ಆಕಾಶದೊಳಗಿಂದ ಯೆಹೋವನ ದೂತನು** ಅವನಿಗೆ ಭಂಗವನ್ನುಂಟು ಮಾಡುವವನಾಗಿ ಅವಸರದಿಂದ **ಅಬ್ರಹಾಮನೇ, ಅಬ್ರಹಾಮನೇ** ಎಂದು ಕೂಗುತ್ತಾನೆ. ಬೈಬಲಿನಲ್ಲಿ ಈ ವಿಧವಾಗಿ ಎರಡು ಸಾರಿ ವ್ಯಕ್ತಿಯ ಹೆಸರನ್ನು ಬಳಸುವಿಕೆಯು ಆ ವ್ಯಕ್ತಿಯ ತಕ್ಷಣದ ಗಮನವನ್ನು ಸೆಳೆದು, ಅವನು ತೊಡಗಿರುವ ಯಾವದೇ ಕೆಲಸವನ್ನು ನಿಲ್ಲಿಸುವುದು ಆಗಿತ್ತು. ಅಲ್ಲದೆ ಅದು ಆತನನ್ನು ಹೊಸದಾಗಿ ಬರುವ ದೈವಿಕ ಅಪ್ಪಣೆಗಳಿಗಾಗಿ ಸಹ ಸಿದ್ಧಗೊಳಿಸುವದಾಗಿತ್ತು.[8] ಪುನಃ, ಮೂಲಪಿತೃವಿನ ಪ್ರತ್ಯುತ್ತರವು **ಇಗೋ, ಇದ್ದೇನೆ**

ಎಂದಾಗಿತ್ತು (ನೋಡಿರಿ 22:1, 7). ಇದು ಕಥೆಯಲ್ಲಿನ ತಿರುವು ಆಗಿರುತ್ತದೆ, ಯಾಕೆಂದರೆ ದೈವಿಕ ಪರೀಕ್ಷೆಯು ತನ್ನ ಉದ್ದೇಶವನ್ನು ಸಾಧಿಸಿತ್ತು. ಈಗ ಆಕಾಶದಿಂದ ಬಂದ ಶಬ್ದವು ಹುಡುಗನ ಪ್ರಾಣಕ್ಕೆ ಈ ಮುಂಚೆ ಇದ್ದ ಮೂಲ ಬೆದರಿಕೆಯನ್ನು ಹಿಮ್ಮೋಗಗೊಳಿಸುತ್ತಾ ಈ ಮುಂದಿಇನ ಆದೇಶವನ್ನು ಕೊಡುತ್ತದೆ: **ನಿನ್ನ ಹುಡುಗನ ಮೇಲೆ ಕೈಹಾಕಬೇಡ, ಅವನಿಗೆ ಏನೂ ಮಾಡಬೇಡ.**

ಈ ಮುಂದಿನ ಹೇಳಿಕೆಯು ಅನೇಕ ವಿಶ್ವಾಸಿಗಳಲ್ಲಿ ಹೋರಾಟವನ್ನುಂಟು ಮಾಡಿರುತ್ತದೆ: **ನೀನು ನಿನ್ನ ಒಬ್ಬನೇ [*ಯಾಚಿಡ್*[9]] ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬದು ಈಗ ತೋರಬಂತು.** ಕೆಲವರು ಈ ಮಾತನ್ನು ದೇವರಿಗೆ ಭವಿಷ್ಯವನ್ನು ಮುಂದಾಗಿ ಕಾಣಲು ಸಾಧ್ಯವಿಲ್ಲ, ಆದರೆ ಕಾಲದ ಆ ಕ್ಷಣದಲ್ಲಿ ಏನು ಅನುಭವಿಸುತ್ತಾನೋ ಅದನ್ನಷ್ಟೆ ಬಲ್ಲನು ಎಂಬ ರೀತಿಯಲ್ಲಿ ಅರ್ಥನಿರೂಪಣೆ ಮಾಡಿರುತ್ತಾರೆ. ಅಂಥ ಅಭಿಪ್ರಾಯವು ದೇವರು ಸರ್ವಜ್ಞಾನಿ ಎಂಬುದನ್ನು ಸ್ಪಷ್ಟವಾಗಿ ಕಲಿಸುವ ಬೈಬಲಿನ ಹಲವಾರು ವಾಕ್ಯಭಾಗಗಳಿಗೆ ವಿರುದ್ಧವಾಗಿರುತ್ತದೆ (ಕೀರ್ತನೆ 139:1-18; ಯೋಹಾನ 21:17; ರೋಮಾ 11:33-36). 22:12ರಲ್ಲಿನ ಘೋಷಣೆಯನ್ನು ಅಕ್ಷರಶಃವಾಗಿ ಭಾವಿಸಿಕೊಳ್ಳಕೂಡದು; ಯೆಹೋವನ ಜ್ಞಾನವು ಕೇವಲ ರೂಪಕೋಕ್ತಿಯ ಅರ್ಥದಲ್ಲಷ್ಟೇ ಮಿತಿಯುಳ್ಳದ್ದಾಗಿತ್ತು.

ಇದನ್ನು ದೃಷ್ಟಾಂತಪಡಿಸಬೇಕಾದರೆ, ಅಬ್ರಹಾಮನ ಯಾತ್ರೆಯ ಇಡೀ ಸನ್ನಿವೇಶವನ್ನು, 12ನೇ ಅಧ್ಯಾಯದಲ್ಲಿ ಆತನು ದೇವರಿಂದ ಕರೆಯಲ್ಪಡುವದರಿಂದ ಮೊದಲ್ಗೊಂಡು ಈಗ ನಮ್ಮ ಮುಂದಿರುವ ವಾಕ್ಯಭಾಗದ ತನಕದ ಯಾತ್ರೆಯನ್ನು ಪುನರಾವಲೋಕನ ಮಾಡುವ ಅವಶ್ಯಕತೆಯಿರುತ್ತದೆ. ಆತನ ಜೀವಿತದ ಕಥನವು ಸೂಚಿಸುವದೇನೆಂದರೆ ಮೂಲಪಿತೃವು ಅನೇಕ ಸಾರಿ ತನ್ನ ನಂಬಿಕೆ ಮತ್ತು ವಿಧೇಯತೆಗಳ ವಿಷಯದಲ್ಲಿ ಕಷ್ಟವನ್ನನುಭವಿಸಿರುತ್ತಾನೆ. ಕೆಲವು ಸಾರಿ ದೇವರಿಗೆ ವಿಧೇಯನಾಗುವದಕ್ಕೆ ಸಾಕಾದ ನಂಬಿಕೆಯಿರುವದಾಗಿ ತೋರ್ಪಡಿಸಿಕೊಂಡಿರುತ್ತಾನೆ, ಮತ್ತು ಬೇರೆ ಕೆಲವು ಪರಿಸ್ಥಿತಿಗಳಲ್ಲಿ, ದುರ್ಬಲ ನಂಬಿಕೆಯ ಕಾರಣದಿಂದಾಗಿ ಮೂಲಪಿತೃವು ಅವಿಧೇಯನಾದನು ಅಥವಾ ಭಾಗಶಃ ಮಾತ್ರವೇ ವಿಧೇಯನಾದನು. ಹೇಗೂ, ಈ ಸಂದರ್ಭದಲ್ಲಿ, ದೇವರು ಅಬ್ರಹಾಮನಿಗಿರುವ ಸಮರ್ಪಣೆಯ ಆಳವೆಷ್ಟೆಂಬುದನ್ನು ಪರೀಶಿಲಿಸಿ ನೋಡಿದನು. ಮೂಲಪಿತೃವು ಹೃದಯಪೂರ್ವಕವಾಗಿ ತನ್ನಲ್ಲಿ ವಿಶ್ವಾಸವಿಟ್ಟು ವಿಧೇಯನಾಗುವಷ್ಟರ ಮಟ್ಟಿಗೆ ಆತ್ಮೀಕವಾಗಿ ಬೆಳೆದಿದ್ದಾನೋ ಎಂದು ಯೆಹೋವನು ಆತನ ಮಗನಾದ ಇಸಾಕನನ್ನು ಬಳಸಿ ಈ ಅಂತಿಮ ಪರೀಕ್ಷೆಯ ಮೂಲಕ ಪರೀಕ್ಷಿಸಿ ನೋಡಲು ಬಯಸಿದ್ದನು. ಆ ಅರ್ಥದಲ್ಲಿ, ನಮ್ಮ ಹಾಗೆಯೇ, ದೇವರು - ಬುದ್ಧಿಪೂರ್ವಕವಾಗಿ ಮಾತ್ರವೇ ಅಲ್ಲ ಆದರೆ ಅನುಭವಾತ್ಮಕವಾಗಿ ಸಹ - ತಮ್ಮ ಮಕ್ಕಳು ಕಠೋರವಾಗಿ ಪರೀಕ್ಷೆಗೊಳ ಪಟ್ಟಾಗಲೂ ಅವರಿಗೆ ನಂಬಿಗಸ್ತರಾಗಿ ಮತ್ತು ವಿಧೇಯರಾಗಿ ಉಳಿಯುವಾಗ ತಂದೆತಾಯಿಗಳಾಗುವ ಆನಂದವನ್ನು ತಿಳಿಯಲು ಬಯಸಿದ್ದನು.

ಅದಕ್ಕೆ ವ್ಯತಿರೇಕವಾದದ್ದು ಸಹ ಅಷ್ಟೆ ಸತ್ಯವಾಗಿದೆ. ಜನರು ತಮ್ಮ ವಿಗ್ರಹಾರಾಧನೆ ಮತ್ತು ಇತರ ಪಾಪಗಳಿಗೆ ಪಶ್ಚಾತ್ತಾಪ ಪಡದಿರುವ ಕಾರಣದಿಂದ ತಾನು ಆದುಕೊಂಡ ಜನಾಂಗದವರು ನಾಶಗೊಳ್ಳುವರು ಮತ್ತು ಸೆರೆಯಾಳಾಗಿ ಒಯ್ಯಲ್ಪಡಲಿದ್ದಾರೆ ಎಂಬುದು (ಬುದ್ಧಿಯಿಂದ) ದೇವರು ಅರಿತುಕೊಂಡವನಾಗಿದ್ದನು. ಹಾಗಿದ್ದರೂ, ಅದು ಸಂಭವಿಸಿದ ವೇಳೆ, ಯೆಹೋವನು ನಿರಾಶೆ ಮತ್ತು ಒಡೆದ ಹೃದಯದ ವೇದನೆಯನ್ನು ಅನುಭವಿಸಿದನು,[10] ತಮ್ಮ ಮಕ್ಕಳು ಅವಿಧೇಯರಾಗಿ ಸಮೀಪಿಸುತ್ತಿರುವ ನಾಶನದಿಂದ ವಿಮುಖರಾಗಲು ನಿರಾಕರಿಸುವ

ಮನುಷ್ಯ ತಂದೆತಾಯಿಗಳು ಹೇಗೆ ವೇದನೆಯನ್ನು ಅನುಭವಿಸುತ್ತಾರೋ ಹಾಗೆಯೇ ಆತನು ಸಹ ಅನುಭವಿಸಿದನು (ಹೋಶೇಯ 11:1-8).

**ವಚನ 13.** ದೇವದೂತನು ಅವನ ಸಂಗಡ ಮಾತಾಡಿದ ಬಳಿಕ, **ಅಬ್ರಹಾಮನು ಕಣ್ಣೆತ್ತಿ ನೋಡುವಾಗ ತನ್ನ ಹಿಂದುಗಡೆ ಒಂದು ಟಗರು ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿ**ರುವದನ್ನು ಕಂಡನು. ಈ ಯಜ್ಞಕ್ಕೆ ಬೇಕಾದ ಪ್ರಾಣಿಯು ಕಾಣಿಸಿಕೊಳ್ಳುವಿಕೆಯು ಈ ಮುಂಚೆ ಮೂಲಪಿತೃವು ತನ್ನ ಮಗನಿಗೆ ಹೇಳಿದ್ದ ಮಾತುಗಳನ್ನು ಜ್ಞಾಪಿಸುತ್ತದೆ: "ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು" (22:8).

**ಅವನು ಹೋಗಿ ಅದನ್ನು ಹಿಡಿದುತಂದು ತನ್ನ ಮಗನಿಗೆ ಬದಲಾಗಿ ಹೋಮಮಾಡಿದನು.** ಇದು ಒಬ್ಬ ವ್ಯಕ್ತಿಯನ್ನು ಜೀವನ ಮುಂದುವರೆಸುವ ಹಾಗೆ ಅನುಮತಿಸಲ್ಪಟ್ಟು ಅವನ (ಇಸಾಕ) ಸ್ಥಾನದಲ್ಲಿ ಬದಲಿ ಪ್ರಾಣಿಯೊಂದನ್ನು ಯಜ್ಞವಾಗಿ ವಧಿಸುವದರ ಬಗ್ಗೆ ಬೈಬಲಿನಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲ್ಪಟ್ಟ ಮೊದಲ ಸಂದರ್ಭವಾಗಿರುತ್ತದೆ. ಇದೊಂದು ಧರ್ಮಶಾಸ್ತ್ರದಲ್ಲಿರುವಂತೆ ಪಾಪಪ್ರಾಯಶ್ಚಿತ್ತದ ಯಜ್ಞವಾಗಿರಲಿಲ್ಲ (ಯಾಜಕಕಾಂಡ 1:2-9; 4:27-31), ಯಾಕೆಂದರೆ ಈ ಯಜ್ಞವು ಸ್ವಲ್ಪದರಲ್ಲಿಯೇ ತನ್ನ ತಂದೆಯ ಕೈಯಲ್ಲಿ ಮರಣವನ್ನು ಅನುಭವಿಸಬೇಕಿದ್ದ ಹುಡುಗನ ಪಾಪಗಳಿಗೋಸ್ಕರವಾದದ್ದು ಆಗಿರಲಿಲ್ಲ. ಬದಲಾಗಿ, ಇದು ಮೂಲಪಿತೃವಿನ ನಂಬಿಕೆಯ ಯಶಸ್ವಿಯುತವಾದ ಪರೀಕ್ಷೆಯಾಗಿತ್ತು. ಈ ಹೊತ್ತಿಗೆ, ಅಬ್ರಹಾಮನು ನಂಬಿದ್ದೇನೆಂದರೆ "ಮಗನು ಸತ್ತರೂ ದೇವರು ಅವನನ್ನು ಬದುಕಿಸಲು ಸಮರ್ಥನಾಗಿದ್ದಾನೆಂದು ತಿಳುಕೊಂಡನು. ಮತ್ತು ಸತ್ತವರೊಳಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು" (ಇಬ್ರಿಯ 11:19), ಅಂದರೆ, "ಸಾದೃಶ್ಯರೂಪದಲ್ಲಿ ಪಡೆದುಕೊಂಡನು" (NIV).[11] ಅಬ್ರಹಾಮನು ಕತ್ತಿಯಿಂದ ನಿಜವಾಗಿಯೂ ಇಸಾಕನ ಚರ್ಮಕ್ಕೆ ಚುಚ್ಚಲಿಲ್ಲವಾದರೂ, ಅವನ ಹೃದಯದಲ್ಲಿನ ದೃಢನಿರ್ಧಾರದಲ್ಲಿ ನೋಡುವದಾದರೆ ಆತನು ಈಗಾಗಲೇ ತನ್ನ ಕತ್ತಿಯನ್ನು ಅವನ ದೇಹದಲ್ಲಿ ಸಿಕ್ಕಿಸಿ ಬಿಟ್ಟಿದ್ದನು. ತತ್ಪರಿಣಾಮವಾಗಿ, ಆತನು ತನ್ನ ಪ್ರಿಯನನ್ನು ಸತ್ತವರೊಳಗಿಂದ ಪುನಃ ಜೀವಿತನಾಗಿ ಪಡೆದುಕೊಂಡನೋ ಎನ್ನುವಷ್ಟು ಸಂತೋಷ ಆತನಿಗೆ ಆಗಿತ್ತು.

**ವಚನ 14. ಅಬ್ರಹಾಮನು ಆ ಸ್ಥಳಕ್ಕೆ** יְהוָה יִרְאֶה *(ಯಾಹು ಯೀರೆ)*, ಅದು **ಯೆಹೋವನ ಬೆಟ್ಟದಲ್ಲಿ ಒದಗುವದು** ಎಂದು ಅನುವಾದಿಸಲ್ಪಟ್ಟಿದೆ. ಈ ಪದಗುಚ್ಛದ ಅರ್ಥವು "ಯೆಹೋವನನು ಕಾಣುವನು" (ನೋಡಿರಿ KJV) ಎಂದು ಆಗಿರಬಲ್ಲದು; ಆದರೆ ಇಲ್ಲಿ, 8ನೇ ವಚನದ ನಿಮಿತ್ತದಿಂದ, "ಒದಗಿಸುವನು" ಎಂಬುದು ಉತ್ತಮ ಅರ್ಥವನ್ನು ಹೊಂದಿದೆ. ಮೂಲಪಿತೃವು ಈ ಸ್ಥಳಕ್ಕೆ ಸ್ವಂತ ವಿಧೇಯತೆಯನ್ನು ಮಹಿಮೆಪಡಿಸಿಕೊಳ್ಳಲು "ಅಬ್ರಹಾಮನು ವಿಧೇಯನಾದನು" ಎಂದು ಹೆಸರಿಡಲಿಲ್ಲ; ಬದಲಾಗಿ. ಆತನು ತನ್ನ ಮಗನ ಬದಲಾಗಿ ಯಜ್ಞಕ್ಕಾಗಿ ಟಗರನ್ನು ಒದಗಿಸಿದ್ದಕ್ಕಾಗಿ ಯೆಹೋವನನ್ನು ಘನ ಪಡಿಸಿದನು. ಇನ್ನೊಂದು ವಿವರವನ್ನು ಸೇರ್ಪಡೆಗೊಳಿಸುವವನಾಗಿ, ಮೋಶೆಯು ಈ ಕಥನವನ್ನು ಓದುವವರೆಲ್ಲರಿಗಾಗಿ ಮಾಹಿತಿಯನ್ನು ನೀಡಿದನು, **ಯೆಹೋವನ ಬೆಟ್ಟದಲ್ಲಿ ಒದಗುವದು ಎಂಬದಾಗಿ ಇಂದಿನವರೆಗೂ ಹೇಳುವದುಂಟಲ್ಲಾ.**

## ದೇವರ ವಾಗ್ದಾನವು ನವೀಕರಿಸಲ್ಪಟ್ಟಿದ್ದು (22:15-19)

**15 ಯೆಹೋವನ ದೂತನು ಆಕಾಶದೊಳಗಿಂದ ಎರಡನೆಯ ಸಾರಿ ಅಬ್ರಹಾಮನನ್ನು ಕರೆದು ಅವನಿಗೆ - 16 ಯೆಹೋವನು ನುಡಿದದ್ದನ್ನು ಕೇಳು; ನೀನು ನಿನ್ನ ಒಬ್ಬನೇ ಮಗನನ್ನು**

**ಸಮರ್ಪಿಸುವದಕ್ಕೆ ಹಿಂದೆಗೆಯದೆ ಹೋದದ್ದರಿಂದ ನಾನು ನಿನ್ನನ್ನು ಆಶೀರ್ವದಿಸೇ
ಆಶೀರ್ವದಿಸುವೆನು; 17ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ
ನಕ್ಷತ್ರಗಳಂತೆಯೂ ಸಮುದ್ರತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು;
ಅವರು ಶತ್ರುಗಳ ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳುವರು. 18ನೀನು ನನ್ನ ಮಾತನ್ನು
ಕೇಳಿದ್ದರಿಂದ ಭೂಮಿಯ ಎಲ್ಲಾ ಜನಾಂಗಗಳಿಗೂ ನಿನ್ನ ಸಂತತಿಯ ಮೂಲಕ
ಆಶೀರ್ವಾದವುಂಟಾಗುವದು ಎಂಬದಾಗಿ ಯೆಹೋವನು ತನ್ನಾಣೆಯಿಟ್ಟು ಹೇಳಿದ್ದಾನೆ ಅಂದನು.
19ತರುವಾಯ ಅಬ್ರಹಾಮನು ತನ್ನ ಸೇವಕರ ಬಳಿಗೆ ತಿರಿಗಿ ಬಂದನು. ಅವರು ಹೊರಟು ಅವನ
ಜೊತೆಯಲ್ಲಿ ಬೇರ್ಷೆಬಕ್ಕೆ ಹೋದರು. ಅಬ್ರಹಾಮನು ಬೇರ್ಷೆಬದಲ್ಲಿ ವಾಸವಾಗಿದ್ದನು.**

**ವಚನಗಳು 15, 16. ಆಕಾಶದೊಳಗಿಂದ** ಇನ್ನೊಂದು ಸಂದೇಶವು ಬಂದಿತು. **ಯೆಹೋವನ ದೂತನು** ಹೇಳಿದ್ದೇನೆಂದರೆ **ಯೆಹೋವನು ತನ್ನಾಣೆಯಿಟ್ಟು ಹೇಳಿದ್ದಾನೆ**, ಇದರರ್ಥವು **ಅಬ್ರಹಾಮನಿಗೆ** ಮಾಡಲ್ಪಟ್ಟ ಪ್ರಮಾಣಕ್ಕೆ ವಿಶೇಷ ಮನ್ನಣೆ ಮತ್ತು ಮಹತ್ವವು ಇತ್ತು, ಯಾಕೆಂದರೆ ಅದು ಯೆಹೋವನ ವಿಶ್ವಾಸರ್ಹವಾದ ಗುಣಸ್ವಭಾವದ ಮೇಲೆ ಆಧಾರಪಡಿಸಲ್ಪಟ್ಟಿತ್ತು (ನೋಡಿರಿ ಯೆರೆಮೀಯ 22:5; 49:13; ಆಮೋಸ 4:2; 6:8; ಇಬ್ರಿಯ 6:13-18). ಬಳಿಕ **ಯೆಹೋವನು** ತಾನು ಮೂಲಪಿತೃವಿಗೆ ಮಾಡಿರುವ ಶಾಸ್ತ್ರೋಕ್ತವಾದ ಆಣೆಗೆ ಕಾರಣವೇನೆಂದು ತಿಳಿಸಿದನು: ಆತನು ತನ್ನ ಕೈಯಲ್ಲಿ ಇಸಾಕನು ಮರಣಿಸುವನೆಂದು ಯೋಚಿಸಿದ್ದರೂ **ಒಬ್ಬನೇ ಮಗನನ್ನು ಸಮರ್ಪಿಸುವದಕ್ಕೆ ಹಿಂದೆಗೆಯದೆ** ವಿಧೇಯತೆಯುಳ್ಳ ನಂಬಿಕೆಯಿಂದ ನಡೆದುಕೊಂಡದ್ದರಿಂದಾಗಿಯೇ.

**ವಚನ 17.** ಅಬ್ರಹಾಮನು ತನ್ನ ಕೃತ್ಯಗಳ ಮೂಲಕವಾಗಿ ಅಂತಹ ಅಂತಿಮವಾದ ವಿಶ್ವಾಸವನ್ನು ತೋರ್ಪಡಿಸಿದ್ದನಾದ್ದರಿಂದ, ಯೆಹೋವನು ಅವನಿಗೆ ಈ ಮುಂಚೆ ಮಾಡಿದ್ದ ವಾಗ್ದಾನಗಳನ್ನು ಪುನಃ ದೃಢಪಡಿಸುತ್ತಾನೆ. ಈ ಸಾರಿ, ಆ ವಾಗ್ದಾನಗಳು ದೇವರ ಮಾರ್ಪಟಾಗದಂಥ ಗುಣಸ್ವಭಾವದಿಂದ ಖಾತ್ರಿ ಪಡಿಸಲ್ಪಟ್ಟವು. ಆ ವಾಗ್ದಾನವು ಏನಾಗಿತ್ತೆಂದರೆ: **ನಾನು ನಿನ್ನನ್ನು ಆಶೀರ್ವದಿಸೇ ಆಶೀರ್ವದಿಸುವೆನು; ನಿನ್ನ ಸಂತತಿಯನ್ನು ಹೆಚ್ಚಿಸೇ ಹೆಚ್ಚಿಸುವೆನು; ಅದನ್ನು ಆಕಾಶದ ನಕ್ಷತ್ರಗಳಂತೆಯೂ ಸಮುದ್ರತೀರದಲ್ಲಿರುವ ಉಸುಬಿನಂತೆಯೂ ಅಸಂಖ್ಯವಾಗಿ ಮಾಡುವೆನು.** ಈ ಮುಂಚಿನ ಸನ್ನಿವೇಶಗಳಲ್ಲಿರುವಂತೆಯೇ, "ಸಂತಾನ" (זֶרַע, *ಜೇರಾ)* ಎಂಬುದು ಇಬ್ರಿಯದಲ್ಲಿ ಏಕವಚನವಾಗಿರುತ್ತದೆ; ಆದರೆ ಅದು ಅನೇಕ ಸಾರಿ "ಸಂತತಿಯವರು" (NIV) ಅಥವಾ "ವಂಶದವರು" (NRSV) ಎಂಬ ಸಾಮೂಹಿಕ ಅರ್ಥವನ್ನು ಹೊಂದಿರುತ್ತದೆ, ಇಲ್ಲಿ ಹಾಗೆಯೇ ಆಗಿರುತ್ತದೆ. "ಆಕಾಶದ ನಕ್ಷತ್ರಗಳು" ಮತ್ತು "ಸಮುದ್ರತೀರದಲ್ಲಿರುವ ಉಸುಬು" ಎಂಬವುಗಳು ಅಸಂಖ್ಯಾತವಾಗಿರುವ ಸಮೂಹಗಳ ಒಂದು ಸ್ಪಷ್ಟವಾದ ಚಿತ್ರವನ್ನು ಮುಂದಿಡುತ್ತವೆ (13:16; 15:5; 26:4; 28:14; 32:12).

ಮೂಲಪಿತೃವಿನ ಸಂತತಿಯವರು **ಶತ್ರುಗಳ** [ದ್ವಾರಗಳನ್ನು] **ಪಟ್ಟಣಗಳನ್ನು ಸ್ವಾಧೀನಮಾಡಿಕೊಳ್ಳುವರು** ಎಂಬ ವಾಗ್ದಾನವು "ಉಪಲಕ್ಷಣಾಲಂಕಾರ" ಎಂಬ ರೂಪಕವಾದ ಭಾಷೆಯನ್ನು ಬಳಸುವದಾಗಿದ್ದು, ಅದರಲ್ಲಿ ಒಂದು ಭಾಗವು (ಒಂದು ದ್ವಾರ) ಸಂಪೂರ್ಣವಾದದ್ದನ್ನು (ಒಂದು ಪಟ್ಟಣ) ಪ್ರತಿನಿಧಿಸುವದಾಗಿದೆ.[12] ಒಂದು ಪಟ್ಟಣವನ್ನು ಸ್ವಾಧೀನಪಡಿಸಿಕೊಳ್ಳುವದಕ್ಕೆ ಮುಖ್ಯವಾದದ್ದೆಂದರೆ ಅದರ ದ್ವಾರವನ್ನು ಬೆಂಕಿಯಿಂದ ಅಥವಾ ದಿಂಡುಗಳಿಂದ ಗುದ್ದುವ ಮೂಲಕ ನಾಶಗೊಳಿಸುವದೇ ಆಗಿತ್ತು. ವಾಗ್ದಾನದ ಈ ಭಾಗವು ಇಸ್ರಾಯೇಲ್ಯರು ಕಾನಾನ್ ದೇಶವನ್ನು ಗೆದ್ದುಕೊಳ್ಳುವ ಘಟನೆಯನ್ನು ಎದುರು

ನೋಡುವದಾಗಿದೆ, ಅದು ಯೆಹೋಶುವನಿಂದ ಆರಂಭಗೊಂಡಿತ್ತು ಆದರೆ ಅರಸನಾದ ದಾವೀದನ ಆಳ್ವಿಕೆಯಲ್ಲಷ್ಟೇ ಪೂರ್ತಿಗೊಂಡಿತ್ತು.

**ವಚನ 18.** ಯೆಹೋವನ ವಾಗ್ದಾನದ ಕಡೆಯ ಭಾಗವು - **ಭೂಮಿಯ ಎಲ್ಲಾ ಜನಾಂಗಗಳಿಗೂ** ಅಬ್ರಹಾಮನ **ಸಂತತಿಯ ಮೂಲಕ ಆಶೀರ್ವಾದವುಂಟಾಗುವದು** ಎಂಬುದು - ದಾವೀದನ ಮೊಮ್ಮಗನಾದ ಯೇಸು ಕ್ರಿಸ್ತನು ಲೋಕದೊಳಗೆ ಬರುವ ತನಕ ಸಿದ್ಧಿಗೆ ಬರಲಿಲ್ಲ (ಮತ್ತಾಯ 1:1-17). ಯೇಸುವಿನ ಮೆಸ್ಸೀಯತ್ವವನ್ನು ಸಾಭಿತುಪಡಿಸಿದಂಥ ಆತನ ಮರಣ ಮತ್ತು ಪುನರುತ್ಥಾನಗಳ ನಂತರವಷ್ಟೇ (ಅಪೊಸ್ತಲರ ಕೃತ್ಯಗಳು 2:29-36; ರೋಮಾ 1:1-4), ವಾಗ್ದಾನದ "ಸಂತಾನ" ಎಂಬುದರ ಭಾವನೆಯು ನಂಬಿಕೆ ಮತ್ತು ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಐಕ್ಯಗೊಳ್ಳುವವರನ್ನೆಲ್ಲಾ ಸೇರ್ಪಡೆಗೊಳಿಸುವದಕ್ಕೆ ವಿಸ್ತಾರಗೊಳಿಸಲ್ಪಟ್ಟಿತ್ತು. ಆ ರೀತಿಯಾಗಿ ಪರಿವರ್ತನೆಗೊಂಡವರೆಲ್ಲರೂ ಪ್ರತಿಯೊಂದು ದೇಶಕ್ಕೆ ಸೇರಿದವರಾಗಿದ್ದು, ಅವರೆಲ್ಲಾ ದೇವರ ವಾಗ್ದಾನಕ್ಕನುಸಾರವಾಗಿ ಅಬ್ರಹಾಮನ "ಸಂತಾನ" ಮತ್ತು "ಬಾಧ್ಯರು" ಎಂದು ಎಣಿಸಲ್ಪಡುತ್ತಾರೆ (ಗಲಾತ್ಯ 3:8, 9, 26-29). ಇದೆಲ್ಲದರ ಅರ್ಥವು ಏನಾಗಿತ್ತೆಂದರೆ ಸ್ವತಃ ಮೂಲಪಿತೃವು ಈ ವಾಗ್ದಾನಗಳೆಲ್ಲಾ ನೆರವೇರುವದನ್ನು ನೋಡುವ ವರೆಗೆ ಬದುಕಿರುವದಿಲ್ಲ ಎಂಬುದೆ; ಆತನು "ತನ್ನಾಣೆಯಿಟ್ಟ" ಯೆಹೋವನು ಒಂದು ದಿನ ಅವುಗಳನ್ನು ನೆರವೇರಿಸುವನು ಎಂಬುದಾಗಿ ನಂಬಿಕೆಯಿಂದ ನಡೆಯಬೇಕಾಗಿತ್ತು (ಇಬ್ರಿಯ 6:13, 14).

ಆತನು (ಯೆಹೋವನ) **ಮಾತನ್ನು ಕೇಳಿದ್ದರಿಂದ** ಭೂಲೋಕದ ಎಲ್ಲಾ ಜನಾಂಗಗಳನ್ನು ಅಬ್ರಹಾಮನ ಸಂತಾನದ (ಸಂತತಿಯವರ) ಮೂಲಕ ಆಶೀರ್ವದಿಸುವೆನು ಎಂದು ದೇವರು ಹೇಳಿದನು. ಈ ಮುಂಚೆ, ಈ ವಾಗ್ದಾನಗಳು ಸಂಪೂರ್ಣವಾಗಿ ಯೆಹೋವನ ಚಿತ್ತ ಮತ್ತು ಉದ್ದೇಶಗಳ ಮೇಲೆ ಆಧಾರವಾಗಿದ್ದವು. ಈ ಕ್ಷಣದಿಂದ ಮೊದಲ್ಗೊಂಡು, ಅವುಗಳು ಯೆಹೋವನ ಚಿತ್ತ ಮತ್ತು ಮೂಲಪಿತೃವಿನ ವಿಧೇಯತೆಯ ಮೇಲೆ ಆಧಾರವಾಗಿರಲಿದ್ದವು. ಅಬ್ರಹಾಮ ಮತ್ತು ಆದಿಕಾಂಡದ ಕಥನದಿಂದ ಆಚೆಗೆ, ಮೂಲಪಿತೃವಿನ ಸಂತತಿಯವರು ಕಾನಾನ್ ದೇಶದಲ್ಲಿ ತಮ್ಮನ್ನು ನೆಲೆಗೊಳಿಸಿಕೊಂಡು ಮತ್ತು ನಿಭಾಯಿಸಿಕೊಂಡು ಹೋಗುವದಕ್ಕೆ ಪ್ರಯತ್ನಿಸುತ್ತಿರುವ ವೇಳೆ ಅವರ ಯಶಸ್ವಿಗೆ ವಿಧೇಯತೆಯು ಅತ್ಯಾವಶ್ಯಕವಾಗಿರಲಿತ್ತು (ಧರ್ಮೋಪದೇಶಕಾಂಡ 6:4-15; 11:13-17; 30:15-20). ಈ ಅಂತಿಮ ಪರೀಕ್ಷೆಯಲ್ಲಿ - ಇಸಾಕನನ್ನು ಯಜ್ಞಮಾಡಬೇಕೆಂಬ - ಅಬ್ರಹಾಮನ ವಿಧೇಯತೆಯುಳ್ಳ ನಂಬಿಕೆಯು ಯಾವದೇ ಪರಿಶೋಧನೆಯ ಸಮಯದಲ್ಲಿ ಎಲ್ಲಾ ವಿಶ್ವಾಸಿಗಳಿಗೆ ಅನುಸರಿಸುವದಕ್ಕಾಗಿ ಒಂದು ಉದಾಹರಣೆಯಾಗಿ ನಿಲ್ಲುತ್ತದೆ.

**ವಚನ 19.** ಟಗರನ್ನು ಯಜ್ಞವಾಗಿ ಅರ್ಪಿಸಿದ ಬಳಿಕ, **ಅಬ್ರಹಾಮನು ತನ್ನ ಸೇವಕರ ಬಳಿಗೆ ತಿರಿಗಿ ಬಂದನು. ಅವರು ಹೊರಟು ಅವನ ಜೊತೆಯಲ್ಲಿ ಬೇರ್ಷೆಬಕ್ಕೆ ಹೋದರು**. ಈ ವಿಭಾಗದ ಕ್ಲುಪ್ತವಾದ ಮುಕ್ತಾಯವು ಕೇವಲ "ಅಬ್ರಹಾಮನು ತನ್ನ ಸೇವಕರ ಬಳಿಗೆ ತಿರಿಗಿ ಬಂದನು" ಎಂದು ಪ್ರಸ್ತಾಪಿಸುತ್ತದೆಂಬ ವಾಸ್ತವಾಶಂವು ಶತಮಾನಗಳಿಂದಲೂ ವ್ಯಾಖ್ಯಾನಕಾರರಿಗೆ ಒಗಟಾಗಿ ಉಳಿದಿರುತ್ತದೆ. ಈ ಹೇಳಿಕೆಯಲ್ಲಿ ಇಸಾಕನನ್ನು ಕೈ ಬಿಟ್ಟಿರುವದನ್ನು ವಿವರಿಸುವದಕ್ಕೆ ರಬ್ಬಿಗಳು ಅನೇಕ ಕಲ್ಪನಾತ್ಮಕವಾದ ವ್ಯಾಖ್ಯಾನಗಳನ್ನು ನೀಡಿರುತ್ತಾರೆ. ಕೆಲವರು ವಾಸ್ತವಿಕದಲ್ಲಿ ಮೂಲಪಿತೃವು ತನ್ನ ಮಗನನ್ನು ಒಂದು ಪಾಪಪ್ರಾಯಶ್ಚಿತ್ತ ಯಜ್ಞವಾಗಿ ಕೊಂದನು ಎಂದು ಹೇಳಿಕೊಳ್ಳುತ್ತಾರೆ. ಇನ್ನು ಕೆಲವರು ನಂಬುವದೇನೆಂದರೆ ಅಬ್ರಹಾಮನು ಅವನನ್ನು ವಧಿಸಿದನು, ಯೆಹೋವನು ಅವನನ್ನು ಸತ್ತವರೊಳಗಿಂದ ಎಬ್ಬಿಸಿದನು, ಮತ್ತು ದೇವದೂತರು ಅವನನ್ನು ಪರಲೋಕಕ್ಕೆ ಹೊತ್ತೊಯ್ದರು ಎಂಬುದೆ. ಇವುಗಳಷ್ಟೆ ಅಲ್ಲದೆ, ಇನ್ನು

ಅನೇಕ ಊಹಾಪೋಹಗಳು "ಇಸಾಕನು ಎಲ್ಲಿ ಹೋದನು?" ಎಂಬ ಪ್ರಶ್ನೆಗೆ ಉತ್ತರಿಸುವದಕ್ಕೆ ಪ್ರಯತ್ನಿಸುತ್ತವೆ.

ಈ ವಿಭಾಗದ ಅಂತ್ಯದಲ್ಲಿ ಇಸಾಕನು ಏಕೆ ಕಾಣಿಸಿಕೊಳ್ಳುವದಿಲ್ಲ ಎಂಬುದನ್ನು ವಿವರಿಸುವದಕ್ಕೆ ಮಾಡುವ ಎಲ್ಲಾ ಪ್ರಯತ್ನಗಳು ಎರಡು ಕಾರಣಗಳಿಗಾಗಿ ಅಗತ್ಯವಿಲ್ಲದವುಗಳಾಗಿವೆ. ಮೊದಲನೆಯದಾಗಿ, ಕಥನದ ಅಂತ್ಯದಲ್ಲಿ ಇಸಾಕನು ಇಲ್ಲದಿರುವಿಕೆಯು ಕಥೆಯ ಆರಂಭದಲ್ಲಿ ಸಾರಳು ಇಲ್ಲದಿರುವದಕ್ಕೆ ಸಮನಾರ್ಥವಾಗಿರುತ್ತದೆ. ಸ್ಪಷ್ಟವಾಗಿರುವಂತೆ, ಅಬ್ರಹಾಮ ಮತ್ತು ಇಸಾಕರು ಮೋರಿಯ ಬೆಟ್ಟಕ್ಕೆ ಪ್ರಯಾಣಿಸುವ ಮುನ್ನ ಸಾರಳಲ್ಲಿದ್ದ ಭಾವಗಳು, ಆಲೋಚನೆಗಳು, ಅಥವಾ ಮಾತುಗಳು ಏನಾಗಿದ್ದವೆಂಬುದನ್ನು ವಿವರಿಸುವದು ಲೇಖಕನ ಉದ್ದೇಶವಾಗಿರಲಿಲ್ಲ. ಅಲ್ಲದೆ ತಾನು ಅನುಭವಿಸಿದ ಸಂಕಷ್ಟದಿಂದ ಹೊರ ಬಂದಾಗ ಇಸಾಕನಲ್ಲಿದ್ದಂಥ ಆ ವಿಧವಾದ ಸಂಗತಿಗಳನ್ನು ಬರೆದಿಡುವುದು ಪ್ರಾಮುಖ್ಯವೆಂದು ಸಹ ಆತನು ಯೋಚಿಸಲಿಲ್ಲ.

ಎರಡನೆಯದಾಗಿ, ಈ ಕಥೆಯ ಅಂತ್ಯದಲ್ಲಿ ಇಸಾಕನ ಅನುಪಸ್ಥಿತಿಯ ಕುರಿತಾದ ಊಹಾಪೋಹಗಳು ವಾಚಕನ ಗಮನವನ್ನು ಅದರ ಕೇಂದ್ರಿಯ ತಿರುಳಿನಿಂದ ದೂರಕ್ಕೆ ಒಯ್ಯುತ್ತವೆ. ಈ ಕಥನದ ಉದ್ದೇಶವು ಇಸಾಕನ ಮನಸ್ಸಿನಲ್ಲಿದ್ದ ಆಲೋಚನೆಗಳನ್ನು ಅಥವಾ ಆತನು ಹಾಗೂ ಆತನ ತಂದೆ ಬೇರ್ಷೆಬಕ್ಕೆ ಹಿಂದಿರುಗುವ ವೇಳೆ ಆತನು ಏನು ಹೇಳಿರಬಹುದು ಎಂಬುದಾಗಿರಲಿಲ್ಲ. ಬದಲಾಗಿ, ಕಥೆಯ ಕಾರಣವು ಏನೆಂದರೆ ಯೆಹೋವನು ಅಬ್ರಹಾಮನನ್ನು ಒಳಪಡಿಸಿದ ಹೆಚ್ಚುಕಡಿಮೆ ಯೋಚಿಸಲಾಗದ ಪರೀಕ್ಷೆಯಲ್ಲಿ - ವಾಗ್ದಾನದ ಮಗುವಾಗಿದ್ದ, ತನ್ನ ಮಗನಾದ ಇಸಾಕನನ್ನು ಕೊಲ್ಲುವುದು - ಉತ್ತೀರ್ಣನಾಗುವಂತೆ ಅಬ್ರಹಾಮನಿಗೆ ಅವಕಾಶ ಕೊಟ್ಟ ನಂಬಿಕೆಯನ್ನು ಎತ್ತಿ ತೋರಿಸುವುದು ಆಗಿತ್ತು. ಆತನ ಸಂಪೂರ್ಣ ವಿಶ್ವಾಸ ಮತ್ತು ದೇವರಿಗೆ ಪ್ರಶ್ನಾತೀತವಾಗಿ ವಿಧೇಯನಾದದ್ದು, ಅವನನ್ನು ಭವಿಷ್ಯದ ವಿಶ್ವಾಸಿಗಳಿಗೆ ನಂಬುವವರ ಪಿತೃವಾಗುವಂತೆ ಶಕ್ತಗೊಳಿಸಿತ್ತು ಎಂಬುದನ್ನು ಕಥನವು ನಮಗೆ ಕಲಿಸುತ್ತದೆ. ಆತನ ಹಾಗೆಯೇ ನಂಬುವವರು ಆತನ ಆತ್ಮೀಕ ಸಂತತಿಯವರಾಗುತ್ತಾರೆ.

## ಅಬ್ರಹಾಮನ ಕುಟುಂಬದ ಕುರಿತಾದ ಒಂದು ಸುದ್ದಿಯ ವರದಿ (22:20-24)

**[20]ಇವುಗಳಾದ ಮೇಲೆ ಅಬ್ರಹಾಮನು ತನ್ನ ತಮ್ಮನಾದ ನಾಹೋರನಿಗೆ ಮಿಲ್ಕಳಲ್ಲಿ ಮಕ್ಕಳು ಹುಟ್ಟಿದರೆಂದು ವರ್ತಮಾನವನ್ನು ಕೇಳಿದನು. [21]ಅವರು ಯಾರಾರಂದರೆ - ಅವನ ಚೊಚ್ಚಲನಾದ ಊಚ್, ಇವನ ತಮ್ಮನಾದ ಬೂಜ್, ಅರಾಮನ ತಂದೆಯಾದ ಕೆಮೂವೇಲ್, ಕೆಸೆದ್, ಹಜೋ, ಪಿಲ್ದಾಷ್, ಇದ್ಲಾಫ್, ಬೆತೂವೇಲ್ ಎಂಬಿವರೇ. [22]ಬೆತೂವೇಲನು ರೆಬೆಕ್ಕಳನ್ನು ಪಡೆದನು. [23]ಈ ಎಂಟು ಮಂದಿಯನ್ನು ಮಿಲ್ಕಳು ಅಬ್ರಹಾಮನ ತಮ್ಮನಾದ ನಾಹೋರನಿಗೆ ಹೆತ್ತಳು. [24]ಇದಲ್ಲದೆ ಅವನ ಉಪಪತ್ನಿಯಾದ ರೂಮಳೆಂಬವಳು ಟೆಬಹ, ಗಹಮ್, ತಹಷ್, ಮಾಕಾ ಎಂಬವರನ್ನು ಹೆತ್ತಳು.**

ಅಬ್ರಹಾಮನ ತಂದೆಯಾದ ತೆರಹನಿಗೆ ಇನ್ನು ಇಬ್ಬರು ಪುತ್ರರಿದ್ದರು: ನಾಹೋರ ಮತ್ತು ಹಾರಾನ. ಕುಟುಂಬವು ಕಾನಾನಿಗೆ ಹೊರಡುವದಕ್ಕೆ ಊರ್ ಪಟ್ಟಣವನ್ನು ತೊರೆಯುವ ಮುನ್ನ ಹಾರಾನನು ಅಲ್ಲಿಯೇ ಮರಣಿಸಿದ್ದನು (11:27, 28). ಆದಿಕಾಂಡದ ಲೇಖಕನು 12ರಿಂದ 19

ಅಧ್ಯಾಯಗಳಲ್ಲಿ ಹಾರಾನನ ಮಗನಾದ ಲೋಟನ ಕುರಿತಾಗಿ ಸ್ವಲ್ಪ ಕಥೆಯನ್ನು ಸೇರ್ಪಡೆಗೊಳಿಸಿರುತ್ತಾನೆ. ಹೇಗೂ, ಈ ಕ್ಷಣಕ್ಕಾದರೋ, ಆತನು ದಾರಿಯನ್ನು ಹಿಮ್ಮೋಗಕ್ಕೆ ತಿರುಗಿಸಿ ನಾಹೋರನ ಕಡೆಗೆ ಬರುತ್ತಾನೆ, ಅನಂತರದಲ್ಲಿ ಇಸಾಕನನ್ನು ಬೇಟಿಯಾಗಿ ಆತನನ್ನು ಮದುವೆಯಾಗಲಿದ್ದ ಅವನ ಮೊಮ್ಮಗಳಾದ ರೆಬೆಕ್ಕಳನ್ನು ಪರಿಚಯಿಸುತ್ತಾನೆ (ಅಧ್ಯಾಯ 24).

**ವಚನ 20.** ಅಬ್ರಹಾಮನ **ತಮ್ಮನಾದ ನಹೋರ**ನ ಕುರಿತಾದ ಸುದ್ದಿಯು, ಇಸಾಕನ ಯಜ್ಞದ ಘಟನೆಯಾದ ನಂತರ ಅನೇಕ ವಾರಗಳು ಎನ್ನುವದಕ್ಕಿಂತಲೂ ಅನೇಕ ವರ್ಷಗಳಾದ ಬಳಿಕ ಬಂದಿರಬಹುದಾಗಿದೆ. **ಇವುಗಳಾದ ಮೇಲೆ** ಎಂಬ ಮಾತು ಹಾರಾನಿನಲ್ಲಿರುವ ಅವನ ತಮ್ಮನ ಕುಟುಂಬದ ಕುರಿತಾಗಿ, ಬಹುಶಃ ಸಂಚಾರಿ ವರ್ತಕರೊಳಗೆ ಪ್ರಯಾಣಿಸುತ್ತಿದ್ದವರಲ್ಲಿ ಒಬ್ಬರ ಮೂಲಕ ಮೂಲಪಿತೃವಿಗೆ ಮಾಹಿತಿಯು ಸಿಕ್ಕುವ ಮುಂಚೆ ಒಂದು ಅನಿರ್ದಿಷ್ಟ ಕಾಲದ ಅಂತವಿರುವದನ್ನು ಗುರುತಿಸುತ್ತದೆ. ಹಾರಾನನ (11:29) ಮಗಳಾದ **ಮಿಲ್ಕಳಲ್ಲಿ** ಅಬ್ರಹಾಮನ ತಮ್ಮನಾದ **ನಾಹೋರನಿಗೆ ಮಕ್ಕಳು ಹುಟ್ಟಿದ್ದಾರೆ** ಎಂಬ ಸುದ್ದಿಯನ್ನು ಕೇಳುವುದು ಅಬ್ರಹಾಮನಿಗೆ ಆಶ್ಚರ್ಯವಾಗಿತ್ತೆಂಬಂತೆ ಕಾಣಿಸುತ್ತದೆ. ಸ್ಪಷ್ಟವಾಗಿರುವಂತೆ, ಆತನು ಹಾರಾನಿನಲ್ಲಿ ಸಹೋದರರನ್ನು ಬಿಟ್ಟು ಹೊರಟ ವೇಳೆ ಅವರಲ್ಲಿ ಯಾರಿಗೂ ಮಕ್ಕಳಿರಲಿಲ್ಲ; ಆದರೆ ಅನಂತರದ ವರ್ಷಗಳಲ್ಲಿ, ಇಬ್ಬರೂ ತಂದೆಗಳಾಗಿದ್ದರು. ಮಿಲ್ಕಳು ಸಾರಳಿಗಿಂತಲೂ ಬಹಳ ಕಿರಿಯವಳಾಗಿರುವ ಸಾಧ್ಯತೆಯಿದೆ. ಆಕೆಗೆ ಎಂಟು ಮಂದಿ ಪುತ್ರರಿದ್ದರು, ಸಾರಳಿಗಾದರೋ ಒಬ್ಬನೇ ಒಬ್ಬ ಮಗನಿದ್ದನು.

**ವಚನಗಳು 21, 22.** ಮಿಲ್ಕಳ **ಚೊಚ್ಚಲನಾದ**ವನು **ಊಚ್**. ಈತನನ್ನು ಜನಾಂಗಗಳ ಕೋಷ್ಟಕದಲ್ಲಿರುವ "ಊಸ್" ಎಂದು ಗೊಂದಲ ಪಡಿಸಿಕೊಳ್ಳಬಾರದು, ಆತನು ಆರಾಮನ ಸಂತತಿಯವನಾಗಿದ್ದನು. ಊಚ್ ಎಂಬುದು ಹಳೆಯ ಒಡಂಬಡಿಕೆಯಲ್ಲಿ ಒಂದು ಸ್ಥಳದ ಹೆಸರಾಗಿ ಸಹ ಬಳಸಲ್ಪಟ್ಟಿದೆ (10:23ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಇಲ್ಲಿ ಪ್ರಸ್ತಾಪಿಸಲ್ಪಟ್ಟಿರುವ **ಬೂಜ್** ಎಂಬುವನು ಯಾಕೋಬನ ಮಗನಾದ ಗಾದ್ ಎಂಬುವನಿಂದ ಹುಟ್ಟಿದವನಲ್ಲ (1 ಪೂರ್ವಕಾಲವೃತ್ತಾಂತ 5:11, 14). ಈ ಹೆಸರು ಸಹ ಸ್ಥಳವೊಂದರ ಉಲ್ಲೇಖದಲ್ಲಿ ಕಾಣಿಸಿಕೊಳ್ಳುತ್ತದೆ. ಯೋಬನಿಗೆ ಬುದ್ಧಿವಾದ ಹೇಳಿದ ಎಲೀಹು ಎಂಬುವನು ಬೂಜ್ ಕುಲಕ್ಕೆ ಸೇರಿದವನೆಂದು ತಿಳಿಸಲಾಗಿದೆ (ಯೋಬ 32:2), ಆ ಕುಲವನ್ನು ಯೆರೆಮೀಯನು ಅರಬಿಯದಲ್ಲಿನ ದೆದಾನ್ಯ ಮತ್ತು ತೇಮಾದವರೊಂದಿಗೆ ಸಂಬಂಧಗೊಳಿಸುತ್ತಾನೆ (ಯೆರೆಮೀಯ 25:23).

**ಕೆಮೂವೇಲ್** ಎಂಬುದು ಅರಣ್ಯಕಾಂಡ 34:24 ಮತ್ತು 1 ಪೂರ್ವಕಾಲವೃತ್ತಾಂತ 27:17ರಲ್ಲಿರುವ ಕೆಲವೊಬ್ಬ ಸಂಬಂಧಿಕರಲ್ಲದ ವ್ಯಕ್ತಿಗಳಿಗೆ ಕೊಡಲ್ಪಟ್ಟಿರುವ ಅದೇ ಹೆಸರಾಗಿರುತ್ತದೆ. ಆತನ ಕುರಿತಾಗಿ ಬೇರೆ ಇನ್ನೇನೂ ತಿಳಿದು ಬಂದಿರುವದಿಲ್ಲ, ಆತನು **ಆರಾಮನ ತಂದೆ** ಎಂದಷ್ಟೆ ಹೇಳಲಾಗಿದ್ದು, ಈತನು 10:22ರಲ್ಲಿರುವ ಶೇಮನ ಸಂತತಿಯವರಿಗಿಂತ ಭಿನ್ನವಾಗಿದ್ದನು. ಹೇಗೂ, ಆರಾಮ ಎಂಬ ಹೆಸರು ಆರಾಮ್ಯರೊಂದಿಗಿನ ಸಂಬಂಧವಿರುವದನ್ನು ಸೂಚಿಸುವದಾಗಿದ್ದು ಅದು ಹಾರಾನಿನಲ್ಲಿರುವ ನಾಹೋರನ ಕುಲಕ್ಕೆ ಹೊಂದಿಕೆಯಾಗುವಂಥದ್ದು.

**ಕೆಸೆದ್** ಎಂಬ ಹೆಸರು ಹಳೆಯ ಒಡಂಬಡಿಕೆಯೊಳಗೆ ಬೇರೆ ಎಲ್ಲಿಯೂ ಕಾಣಿಸುವದಿಲ್ಲ. ಇದು ಉಚ್ಚಾರಣಾರೂಪವಾಗಿ ಕಸ್ದೀಯರಿಗೆ ಸಂಬಂಧ ಹೊಂದಿರುವದಾಗಿ ಸೂಚಿಸುವ ಒಲವು ತೋರುತ್ತದೆ, ಇವರು ಕ್ರಿ.ಪೂ. ಏಳನೆಯ ಶತಮಾನದ ಆರಂಭದಲ್ಲಿ ನೆಬೂಕದ್ನೆಚ್ಚರನ

ನಾಯಕತ್ವದಲ್ಲಿ ಬಾಬಿಲೋನ ಸಾಮ್ರಾಜ್ಯವನ್ನು ಸ್ಥಾಪಿಸಿದವರು. **ಹಜೋ, ಪಿಲ್ದಾಷ್**, ಮತ್ತು **ಇದ್ಲಾಫ್** ಎಂಬುವರು ಪ್ರಾಚೀನ ಸಾಹಿತ್ಯದೊಳಗೆ ಇಲ್ಲಿ ಮಾತ್ರವೇ ಪ್ರಸ್ತಾಪಿಸಲ್ಪಟ್ಟಿರುತ್ತಾರೆ.

**ಬೆತೂವೇಲ್** ಎಂಬುವನು ನಾಹೋರನಿಗೆ ಮಿಲ್ಕಳಿಗೆ ಹುಟ್ಟಿದ ಪುತ್ರರಲ್ಲಿ ಪಟ್ಟಿ ಮಾಡಲ್ಪಟ್ಟಿರುತ್ತಾನೆ. ಈತನ ಹೆಸರಿನ ಅರ್ಥವು "ದೇವರಲ್ಲಿ ನೆಲೆಸುವವನು" ಎಂದಾಗಿರಬಹುದು ಅಥವಾ ಇದು "ದೇವರ ಮನುಷ್ಯ"[13] ಎಂಬುದಕ್ಕೆ ಸಮಾನವಾಗಿರಬಹುದು. 25:20ರಲ್ಲಿ, ಬೆತೂವೇಲ್‌ನು ಪದ್ದನ್ ಆರಾಮಿನಲ್ಲಿ (ಮೆಸಪೋತಾಮ್ಯದ ವಾಯುವ್ಯದಲ್ಲಿ) ನೆಲೆಸಿದ್ದ ಒಬ್ಬ "ಆರಾಮ್ಯನು" ಎಂದು ಗುರುತಿಸಲ್ಪಟ್ಟಿದ್ದಾನೆ.

**ವಚನ 23. ಬೆತೂವೇಲ್‌**ನು **ರೆಬೆಕ್ಕ** ಮತ್ತು ಲಾಬಾನನ ತಂದೆಯಾಗಿದ್ದನು (24:15, 47; 28:5). ರೆಬೆಕ್ಕಳು ಇಲ್ಲಿ ವಾಕ್ಯದೊಳಗೆ ಪ್ರಸ್ತಾಪಿಸಲಾಗಿರುವ ನಾಹೋರನ ಸಂತತಿಯವರೊಳಗೆ ಏಕೈಕ ಮಹಿಳೆ ಎಂದು ಎದ್ದು ಕಾಣುತ್ತಾಳೆ. ರೆಬೆಕ್ಕಳನ್ನು ಪರಿಚಯಿಸುವುದು ವಾಚಕರನ್ನು ಆಕೆಯು 24ನೇ ಅಧ್ಯಾಯದಲ್ಲಿ ಇಸಾಕನನ್ನು ಮದುವೆಯಾಗುವ ಘಟನೆಗೆ ಸಿದ್ಧಗೊಳಿಸುತ್ತದೆ.

**ವಚನ 24.** ನಾಹೋರನಿಗೆ, ಅವನ ಅಣ್ಣನಾದ ಅಬ್ರಹಾಮನಂತೆಯೇ ಒಬ್ಬ **ಉಪಪತ್ನಿ** ಇದ್ದಳು; ಆಕೆಯು **ರೂಮಳೆಂಬವಳು**. ಒಬ್ಬ ಉಪಪತ್ನಿಯು ಮುಂಚೆ ದಾಸಿಯಾಗಿದ್ದು, ಅನಂತರದಲ್ಲಿ ಎರಡನೆಯ ವರ್ಗದ ಪತ್ನಿಯಾಗಿ ಮೊದಲ ಪತ್ನಿಗಿಂತಲೂ ಕಡಿಮೆಯಾದ ಕಾನೂನಾತ್ಮಕ ಹಕ್ಕುಗಳನ್ನು ಹೊಂದಿರುತ್ತಿದ್ದಳು (16:3ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ಆಕೆಯ ಗಂಡನ ಕುಟುಂಬದ ಒಂದು ಭಾಗವಾಗಿ, ಆಕೆಯ ಪುತ್ರರಿಗೆ ಸಹ ಅವರ ತಂದೆ ಆಸ್ತಿಯಲ್ಲಿ ಭಾಗವಿರುತ್ತಿತ್ತು.[14] ರೂಮಳು ನಾಲ್ವರು ಪುತ್ರರಿಗೆ ಜನ್ಮ ನೀಡಿದಳು: **ಟೆಬಹ, ಗಹಮ್, ತಹಷ್, ಮಾಕಾ**. ಅವರ ಕುರಿತಾಗಿ ಅಷ್ಟಾಗಿ ತಿಳಿದಿರುವದಿಲ್ಲ, ಆದರೆ ಅವರ ಹೆಸರುಗಳು ಅಧುನಿಕ ಲೆಬನೊನ ಮತ್ತು ಸಿರಿಯಗಳಲ್ಲಿರುವ ವಿವಿಧ ಸ್ಥಳಗಳೊಂದಿಗೆ ಸಂಬಂಧ ಹೊಂದಿರುತ್ತವೆ.[15] ಒಟ್ಟಾರೆಯಾಗಿ, ನಾಹೋರನಿಗೆ ಹನ್ನೆರಡು ಪುತ್ರರಿದ್ದರು - ಆತನ ಹೆಂಡತಿಯಾದ ಮಿಲ್ಕಳಲ್ಲಿ ಎಂಟು ಮಂದಿ ಮತ್ತು ರೂಮಳಲ್ಲಿ ನಾಲ್ಕು ಮಂದಿ.

## ಅನ್ವಯಿಸುವಿಕೆ

### ಅಬ್ರಹಾಮನ ನಂಬಿಕೆ (ಅಧ್ಯಾಯಗಳು 12-22)

ಅಬ್ರಹಾಮನು ಕಲ್ದೀಯರ ಊರ್ ಪಟ್ಟಣದಲ್ಲಿದ್ದ ತನ್ನ ಸಂಬಂಧಿಕರನ್ನೆಲ್ಲಾ ತೊರೆದು ಕಾನಾನ್ ದೇಶಕ್ಕೆ ಹೋಗುವಂತೆ ಕರೆಯಲ್ಪಟ್ಟ ಸಮಯದಿಂದ, ಆತನು ದೇವರ ಮಾತನ್ನು ಆಲಿಸುತ್ತಾ ಆತನಿಗೆ ವಿಧೇಯನಾದಂತೆ ಹೆಚ್ಚೆಚ್ಚಾದ ನಂಬಿಕೆಯನ್ನು ಬೆಳೆಸಿಕೊಂಡನು.

ಆತನು ಮತ್ತು ಆತನ ಪರಿವಾರವು ವಾಗ್ದಾನ ದೇಶಕ್ಕೆ ಬಂದು ಸೇರಿದ ಸ್ವಲ್ಪ ಕಾಲದಲ್ಲಿಯೇ, ಕ್ಷಾಮದ ಕಾರಣದಿಂದಾಗಿ ಐಗುಪ್ತಕ್ಕೆ ಹೋದರು. ಅಲ್ಲಿ ಆತನು ತನ್ನ ಹೆಂಡತಿಯ ವಿಷಯದಲ್ಲಿ ಫರೋಹನಿಗೆ ಸುಳ್ಳಾಡಿ ಅವಳನ್ನು ತನ್ನ ತಂಗಿ ಎಂದು ಹೇಳಿದ್ದನು (12:10–20). ವರ್ಷಗಳ ಬಳಿಕ, ಆತನು ಗೆರಾರಿನ ಅರಸನಿಗೆ ಸಹ ಹಾಗೆಯೇ ಮಾಡಿದ್ದನು (20:1–18). ಒಂದು ಹಂತದಲ್ಲಿ, ಆತನು ಸ್ವಾಭಾವಿಕ ಮಗನು ಹುಟ್ಟುವನೆಂಬ ನಿರೀಕ್ಷೆಯನ್ನೇ ಕೈ ಬಿಟ್ಟಿದ್ದನು ಮತ್ತು ಆತನ ದಾಸನಾದ ಎಲೀಯೆಜರನನ್ನು ತನ್ನ ಬಾಧ್ಯಸ್ಥನನ್ನಾಗಿ ದತ್ತು ಪಡೆಯಲು ಪ್ರಯತ್ನಿಸಿದನು (15:1–4). ತರುವಾಯ ಆತನು ಸಾರಳ ಸಲಹೆಗೆ ಕಿವಿಗೊಟ್ಟು ಹಾಗರಳನ್ನು ತನ್ನ ಒಬ್ಬ ದಾಸ-ಹೆಂಡತಿಯನ್ನಾಗಿ ಮಾಡಿಕೊಂಡನು, ಆಕೆಯಲ್ಲಿ ಒಬ್ಬ

ಮಗನನ್ನು ಪಡೆದನು (16:1-4). ಇಸ್ಮಾಯೇಲನು ಹುಟ್ಟಿದ ನಂತರ, ಈ ಮಗನನ್ನು ವಾಗ್ದಾನದ ಮಗನನ್ನಾಗಿ ಸ್ವೀಕರಿಸಿಕೊಳ್ಳಬೇಕೆಂದು ಅಬ್ರಹಾಮನು ದೇವರನ್ನು ಬೇಡಿಕೊಂಡನು. ಸಾರಳು ಒಬ್ಬ ಮಗನನ್ನು ಹಡೆಯುವಳು ಎಂದು ಯೆಹೋವನು ಈತನಿಗೆ ತಿಳಿಸಿದಾಗ, ಒಬ್ಬ ವೃದ್ಧನಾಗಿದ್ದ ಈತನು ಅಪನಂಬಿಕೆಯಿಂದ ನಕ್ಕನು (17:1, 15-19).

ಕೆಲವು ಸಮಯಗಳಲ್ಲಿ, ಮೂಲಪಿತೃವಿನ ನಂಬಿಕೆಯು ಚಂಚಲಗೊಂಡಿತ್ತು, ಮತ್ತು ಆತನ ವಿಧೇಯತೆಯು ಅಷ್ಟೇನೂ ಪರಿಪೂರ್ಣವಾಗಿರಲಿಲ್ಲ. ಹೇಗೂ, ಅಬ್ರಹಾಮನ ಅನುಭವಗಳುದ್ದಕ್ಕೂ, ದೇವರು ನಂಬಿಗಸ್ತನಾಗಿದ್ದನು, ಆತನನ್ನು ಬಂಗಾರ, ಬೆಳ್ಳಿ, ಮಂದೆಗಳನ್ನು, ಮತ್ತು ಹಿಂಡುಗಳನ್ನು ನೀಡಿ ಸಕಾರಾತ್ಮಕವಾಗಿ ಆಶೀರ್ವದಿಸಿದ್ದನು. ಮೂಲಪಿತೃವಿನ ನಂಬಿಕೆಯು ದುರ್ಬಲವಾಗಿದ್ದ ವೇಳೆ, ಯೆಹೋವನು ಆತನಿಗೆ ಊರ್ ಪಟ್ಟಣದಲ್ಲಿ ಮತ್ತು ಅನಂತರ ಹಾರಾನಿನಲ್ಲಿ ಮಾಡಿದ್ದ ವಾಗ್ದಾನಗಳ ಕುರಿತು ಪುನರಾಶ್ವಾಸನೆ ನೀಡಿದನು.

ಯೆಹೋವನು ಯಾವಾಗಲೂ ಅಬ್ರಹಾಮನನ್ನು ನಂಬಿದ್ದನು, ಮೂಲಪಿತೃವಿಗೆ ಇನ್ನು ಮೇಲೆ ತನ್ನಲ್ಲಿಯೇ ನಂಬಿಕೆಯಿಲ್ಲ ಎಂದು ಕಂಡರೂ ಯೆಹೋವನು ಅವನನ್ನು ನಂಬಿದ್ದನು. ಅಬ್ರಹಾಮನ ಕಡೆಯವರು ಮೂಡಣದ ನಾಲ್ಕು ಮಂದಿ ಅರಸರನ್ನು ಸೋಲಿಸಿದ ಬಳಿಕ (14:8-16), ಯೆಹೋವನು ಭಯಗೊಂಡಿದ್ದ ತನ್ನ ಸೇವಕನಿಗೆ ಹೀಗೆ ಹೇಳಿದನು, “ನಾನು ನಿನಗೆ ಗುರಾಣಿಯಾಗಿದ್ದೇನೆ; ನಿನಗೋಸ್ಕರ ಅತ್ಯಧಿಕ ಬಹುಮಾನವು ಇಟ್ಟದೆ” (15:1). ಅಬ್ರಹಾಮನಿಗೆ ತೊಂಭತ್ತೊಂಭತ್ತು ಮತ್ತು ಸಾರಳಿಗೆ ಎಂಭತ್ತೊಂಭತ್ತು ವರ್ಷವಾಗಿದ್ದ ವೇಳೆ, ದೇವರು ಅವರಿಗೊಬ್ಬ ಮಗನು ಹುಟ್ಟುವನೆಂದು ಪ್ರಕಟಗೊಳಿಸುವ ಮೂಲಕ ತನ್ನ ಒಡಂಬಡಿಕೆಯ ವಾಗ್ದಾನಗಳನ್ನು ಪುನರುಚ್ಛರಿಸಿದನು. ದೇವರು ತನ್ನನ್ನು *ಎಲ್ ಶಡ್ದಾಯ್,* ಅಥವಾ “ಸರ್ವಶಕ್ತ ದೇವರು” ಎಂದು ಪರಿಚಯಿಸಿಕೊಳ್ಳುವ ಮೂಲಕ ಆರಂಭಿಸಿದನು (17:1-8, 15-19). ತರುವಾಯ, ಅಬ್ರಹಾಮ ಮತ್ತು ಸಾರಳಿಗೆ ಒಬ್ಬ ಮಗನು ಹುಟ್ಟುವನೆಂಬ ವಾಗ್ದಾನವನ್ನು ಯೆಹೋವನು ಪುನಃ ದೃಢಪಡಿಸಿದನು (18:10). ಆಕೆಯು ಸಹ, ಅಪನಂಬಿಕೆಯಿಂದ ನಕ್ಕಳು. ಯೆಹೋವನು ವಾಗ್ದಾನವನ್ನು ಪುನರುಚ್ಛರಿಸಿದನು, ಹುಡುಗನು ಮುಂದಿನ ವರ್ಷದಲ್ಲಿ ಜನಿಸುವನು ಎಂಬ ಸುಳಿವು ನೀಡಿದನು. ತನಗೆ “ಅಸಾಧ್ಯವಾದದ್ದು” ಯಾವದೂ ಇಲ್ಲ ಎಂದು ಹೇಳುವ ಮೂಲಕ ಆತನು ಮುಕ್ತಾಯಗೊಳಿಸಿದನು (18:9-15).

ಯೆಹೋವನ ವಾಗ್ದಾನಗಳು ಮತ್ತು ನಂಬಿಗಸ್ತಿಕೆಯ ಕಾರಣದಿಂದ, ಅಬ್ರಹಾಮನ ನಂಬಿಕೆಯು ಕ್ರಮೇಣವಾಗಿ ಬಲಗೊಳ್ಳುತ್ತಾ ಬೆಳೆಯಿತು. ಆತನ ಮತ್ತು ಸಾರಳ ದೇಹಗಳು, ಸಂತಾನೋತ್ಪತ್ತಿಗೆ ಸಂಬಂಧ ಪಟ್ಟಂತೆ ಮೃತಪ್ರಾಯವಾಗಿದ್ದ ವೇಳೆ, ಆತನು “ದೇವರು ಸತ್ತವರನ್ನು ಬದುಕಿಸುವವನಾಗಿಯೂ ಇಲ್ಲದ್ದನ್ನು ಇರುವದಾಗಿ ಕರೆಯುವವನಾಗಿಯೂ ಇದ್ದಾನೆಂದು” ವಿಶ್ವಾಸಿದನು (ರೋಮಾ 4:17). ಆತನು ತನ್ನ ನಿರೀಕ್ಷೆಯನ್ನು ಯೆಹೋವನ ಶಕ್ತಿ ಮತ್ತು ನಂಬಿಗಸ್ತಿಕೆಗಳ ಮೇಲೆ ಆಧಾರಗೊಳಿಸಿದನು. ನಾವು ಓದುವದೇನೆಂದರೆ,

> ... ಅಬ್ರಹಾಮನು ತಾನು ಅನೇಕ ಜನಾಂಗಗಳಿಗೆ ಮೂಲಪಿತೃವಾಗುವೆನೆಂಬ ನಿರೀಕ್ಷೆಗೆ ಆಸ್ಪದವಿಲ್ಲದಿರುವಾಗಲೂ ನಿರೀಕ್ಷಿಸಿ ನಂಬಿದನು ... ದೇವರು ಮಾಡಿದ ವಾಗ್ದಾನದ ವಿಷಯದಲ್ಲಿ ಅವನು ಅಪನಂಬಿಕೆಯಿಂದ ಚಂಚಲಚಿತ್ತನಾಗಲಿಲ್ಲ. ದೇವರನ್ನು ಘನಪಡಿಸುವವನಾಗಿ ಆತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ಸಮರ್ಥನೆಂದು ಪೂರಾ ಭರವಸವಿಟ್ಟು ದೃಢನಂಬಿಕೆಯುಳ್ಳವನಾದನು (ರೋಮಾ 4:18-21).

ಆದಿಕಾಂಡದ ವಾಕ್ಯವು ಹೀಗೆ ಹೇಳುತ್ತದೆ, "ಯೆಹೋವನು ತಾನು ಹೇಳಿದ್ದಂತೆಯೇ ಸಾರಳ ಮೇಲೆ ದಯವಿಟ್ಟನು ... ಹೇಗಂದರೆ ಸಾರಳು ಬಸುರಾಗಿ ದೇವರು ಮೊದಲು ಸೂಚಿಸಿದ ಕಾಲದಲ್ಲಿ ಅಬ್ರಹಾಮನಿಂದ ಅವನ ಮುಪ್ಪಿನಲ್ಲೇ ಮಗನನ್ನು ಹೆತ್ತಳು" (21:1, 2). ಅಷ್ಟೊಂದು ವರ್ಷಗಳ ಬಂಜೆಯಾಗಿದ್ದೇನೆಂಬ ದುಃಖದಿಂದ ಹೋರಾಟವನ್ನು ಅನುಭವಿಸಿದ ನಂತರ ಆಕೆಯು ನಂಬಿಕೆಯು ಸಹ ನ್ಯಾಯವೆಂದು ಸಾಭಿತುಗೊಳಿಸಲ್ಪಟ್ಟಿತು. ಈ ಸಾರಿ, ಆಕೆಯು ಅಪನಂಬಿಕೆಯಿಂದ ನಗಲಿಲ್ಲ, ಆದರೆ ಸಂತೋಷದಿಂದ ನಕ್ಕಳು. ಆಕೆಯು ಈ ಅತ್ಯಾಶ್ಚರ್ಯವಾದ ಸುದ್ದಿಯನ್ನು ಕೇಳಿಸಿಕೊಳ್ಳುವವರನ್ನೆಲ್ಲಾ ತನ್ನೊಂದಿತೆ ಸಂತೋಷ ಪಡುವಂತೆ ಕರೆದಳು (21:6).

ಇಬ್ರಿಯರಿಗೆ ಪತ್ರಿಕೆಯ ಲೇಖಕನು ಪ್ರತಿಯೊಂದು ಯುಗದಲ್ಲಿನ ದೇವರ ಜನರು ಅನುಕರಣೆ ಮಾಡುವದಕ್ಕೆ ಅಬ್ರಹಾಮನ ಮತ್ತು ಸಾರಳ ನಂಬಿಕೆಯ ಪ್ರತಿಕ್ರಿಯೆಗಳನ್ನು ಮಾದರಿಗಳನ್ನಾಗಿ ಬಳಸಿದನು (ಇಬ್ರಿಯ 11:8-12). ಅವರು ದೇವರ ವಾಗ್ದಾದನ ನೆರವೇರಿಕೆಯನ್ನು ಅನುಭವ ಮಾಡಿದ ಬಳಿಕ, ಅದರಲ್ಲಿ ವಯಸ್ಸಾಗಿದ್ದ ಎರಡು ದೇಹಗಳಲ್ಲಿ ಸಮರ್ಥತೆಯನ್ನು ಪುನರುತ್ಥಾನಗೊಳಿಸುವುದು ಮತ್ತು ಇಸಾಕನ ಜನನವಾಗುವುದು ಸೇರಿದ್ದರಿಂದ ಆತನು ನಿಶ್ಚಯವಾಗಿಯೂ ಸರ್ವಶಕ್ತ ದೇವರು ಎಂಬುದನ್ನು ಅರಿತುಕೊಂಡಿದ್ದರು.

ಬಹಳಷ್ಟು ಕಾಲದಿಂದ ಎದುರು ನೋಡಲ್ಪಟ್ಟ ವಾಗ್ದಾನದ ಮಗನಾಗಿ ಹುಟ್ಟಿದ ಇಸಾಕನನ್ನು ಯಜ್ಞವಾಗಿ ಅರ್ಪಿಸಬೇಕೆಂದು ದೇವರು ಅಬ್ರಹಾಮನಿಗೆ ಹೇಳಿದ ವೇಳೆ, ಅವನ ನಂಬಿಕೆಯ ಅಂತಿಮ ಪರೀಕ್ಷೆಯನ್ನು ಸಂಧಿಸಿತ್ತು (22:1-14). ಯಾವ ಪ್ರಶ್ನೆಯನ್ನು ಮಾಡದೆ, ಅಬ್ರಹಾಮನು ತನ್ನ ಮಗನ್ನು ಮೋರಿಯ ಬೆಟ್ಟಕ್ಕೆ ಕರೆದೊಯ್ದು ಆತನನ್ನು ಒಂದು ಯಜ್ಞವೇದಿಯ ಮೇಲಿಟ್ಟನು. ಆತನು ವಧಿಸುವದಕ್ಕೆ ಕತ್ತಿಯನ್ನು ಹಿಡಿದುಕೊಂಡಿದ್ದ ವೇಳೆ ಒಬ್ಬ ದೇವದೂತನು ಅವನ ಕೈಯನ್ನು ತಡೆದಿದ್ದನು. ಮೂಲಪಿತೃವು ಈ ಹೊತ್ತಿಗಾಗಲೇ ದೇವರನ್ನು ಪೂರ್ಣವಾಗಿ ವಿಶ್ವಾಸಿಸಿದ್ದನು ಮತ್ತು ಆತನಿಗೆ ಸತ್ತವರನ್ನು ಎಬ್ಬಿಸುವ ಶಕ್ತಿಯಿದೆ ಎಂದು ತಿಳಿದಿದ್ದನು. ಆತನ ನಂಬಿಕೆ ಮತ್ತು ವಿಧೇಯತೆಯ ಫಲಿತವಾಗಿ, ಅಬ್ರಹಾಮನು ಬಹಳವಾಗಿ ಆಶೀರ್ವದಿಸಲ್ಪಟ್ಟನು ಮತ್ತು ನಂಬುವವರಿಗೆ ಪಿತೃವಾಗಿ ಮಾರ್ಪಟ್ಟಿರುತ್ತಾನೆ (ರೋಮಾ 4:16).

## ನಮ್ಮ ನಂಬಿಕೆಯ ಪರೀಕ್ಷೆ (22:1-14)

ಜೀವನದಲ್ಲಿನ ಪ್ರಾಮುಖ್ಯವಾದ ಕ್ಷೇತ್ರಗಳಲ್ಲಿ ಪರೀಕ್ಷೆಗಳನ್ನು ಅಥವಾ ಪರಿಶೋಧನೆಗಳನ್ನು ಸಹಿಸುವದು ಒಂದು ಸುಖಕರ ಅನುಭವಾವಿರುವದಿಲ್ಲ, ಆದರೆ ಅವಶ್ಯಕವಾಗಿರುತ್ತದೆ. ಒಬ್ಬನು ಶಾಲೆಯಲ್ಲಿ ಕಠಿಣವಾದ ವಿಷಯಗಳಲ್ಲಿ ಪರಿಣಿತಗೊಳ್ಳಲು ಪ್ರಯತ್ನಿಸುತ್ತಿದ್ದರೂ ಸರಿಯೇ, ಒಂದು ಹೊಸ ಉದ್ಯೋಗಕ್ಕಾಗಿ ತರಬೇತಿಗೊಳ್ಳುತ್ತಿದ್ದರೂ ಸರಿಯೇ, ಅಥವಾ ಒಬ್ಬ ವಿಶ್ವಾಸರ್ಹನಾದ ಉದ್ಯೋಗಿಯಾಗಿ ಅರ್ಹತೆ ಮತ್ತು ಫಲದಾಯಕತೆಯನ್ನು ಉತ್ತಮಪಡಿಸಿಕೊಳ್ಳುವದಕ್ಕೆ ಪ್ರಯಾಸ ಪಡುತ್ತಿದ್ದರೂ ಸರಿಯೇ ಇದು ಸತ್ಯವಾಗಿರುತ್ತದೆ. ಅದೇ ರೀತಿಯಲ್ಲಿಯೇ, ನಂಬಿಕೆಯ ನಡೆಯಲ್ಲಿ, ಪರೀಕ್ಷೆಗೊಳಗಾಗುವುದು ಮತ್ತು ಪರೀಶೋಧನೆಗಳನ್ನು ಎದುರಿಸುವುದು ಆತ್ಮೀಕವಾಗಿ ಬೆಳೆಯಲು ಮತ್ತು ಒಬ್ಬನು ದೇವರ ಕಡೆಗೆ ಹೊಂದಿರುವ ಸಮರ್ಪಣೆಯ ಗುಣಮಟ್ಟವನ್ನು ತೋರ್ಪಡಿಸುವದಕ್ಕಾಗಿ ಅತ್ಯಾವಶ್ಯಕವಾಗಿರುತ್ತವೆ. ಬಲಿಷ್ಠವಾದ ದೈಹಿಕ ಸ್ನಾಯುಗಳನ್ನು ನಿರ್ಮಿಸಿಕೊಳ್ಳಬೇಕಾದರೆ,

ಒಬ್ಬ ಭಾರ ಎತ್ತುವವನು ಪ್ರತಿರೋಧವನ್ನು ಒದಗಿಸುವಂಥದ್ದರ ವಿರುದ್ಧವಾಗಿ ಕೆಲಸ ಮಾಡಬೇಕಾಗುತ್ತದೆ. ಅದೇ ರೀತಿಯೇ, ಸುಮ್ಮನೆ ಇದ್ದರೆ ನಮ್ಮನ್ನು ನಾಶನದ ಒಂದು ಸಮುದ್ರದ ಆಳಕ್ಕೆ ಎಳೆದುಕೊಂಡು ಹೋಗಬಲ್ಲಂಥ ಅಪರಾಧದ ಅಲೆಗಳ ವಿರುದ್ಧವಾಗಿ ಈಜಾಡುವದಕ್ಕೆ ಅಗತ್ಯವಿರುವ ಆತ್ಮೀಕ ಸ್ನಾಯುಗಳನ್ನು ಅಭಿವೃದ್ಧಿಪಡಿಸಿಕೊಳ್ಳುವದಕ್ಕೆ ನಮಗೆ ಸಹಾಯ ಮಾಡಲು ಯೆಹೋವನು ನಮ್ಮನ್ನು ಶೋಧನೆಗಳೊಳಗೆ ಬಿಡುತ್ತಾನೆ ಮತ್ತು/ಅಥವಾ ಶೋಧಿಸುವಂತೆ ಸೈತಾನನಿಗೆ ಅನುಮತಿಸುತ್ತಾನೆ.

ಇಬ್ರಿಯ ಮತ್ತು ಗ್ರೀಕ್ ಎರಡರಲ್ಲಿಯೂ, "ಶೋಧನೆ" (ಒಂದು ಕೆಟ್ಟದಾದ ಅರ್ಥದಲ್ಲಿ) ಎಂದು ಅನುವಾದಿಸಲ್ಪಟ್ಟಿರುವ ಅದೇ ಇಬ್ರಿಯ ಮೂಲ ಪದವು ಅನೇಕ ಸಾರಿ "ಪರೀಕ್ಷಿಸು" (ಒಂದು ಒಳ್ಳೇ ಅರ್ಥದಲ್ಲಿ) ಅನುವಾದಿಸಲ್ಪಟ್ಟಿದೆ, ಮತ್ತು ಸನ್ನಿವೇಶವು ಮಾತ್ರವೇ ಅದರ ಅರ್ಥವನ್ನು ನಿರ್ಧರಿಸುವದಾಗಿದೆ.[16] ಶಾಸ್ತ್ರಗಳು ನಮಗೆ ಕಲಿಸುವದೇನೆಂದರೆ ಸೈತಾನನು ಪಾಪ ಮಾಡಿ ಆತ್ಮೀಕವಾಗಿ ನಾಶಗೊಳ್ಳುವಂತೆ ವಿಶ್ವಾಸಿಗಳನ್ನು "ಶೋಧನೆ ಮಾಡುತ್ತಾನೆ" (ಮತ್ತಾಯ 4:1-11; ಮಾರ್ಕ 1:13; 1 ಕೊರಿಂಥ 7:5; 1 ಥೆಸಲೋನಿಕ 3:5 ಯಾಕೋಬ 1:13-15). ಹೇಗೂ, ದೇವರು ತನ್ನ ಜನರನ್ನು ಬಲಗೊಳಿಸುವದಕ್ಕಾಗಿ ಮತ್ತು ಅವರು ತನಗೆ ನಂಬಿಗಸ್ತರಾಗಿರುವರೋ ಎಂಬುದನ್ನು ಸಾಭಿತುಪಡಿಸಿಕೊಳ್ಳಲು ಅವರನ್ನು ಪರೀಕ್ಷಿಸುತ್ತಾನೆ (22:1; ವಿಮೋಚನಕಾಂಡ 20:20; ಧರ್ಮೋಪದೇಶಕಾಂಡ 8:2; ಯೋಹಾನ 6:6; 1 ಕೊರಿಂಥ 10:13; ಇಬ್ರಿಯ 11:17; ಯಾಕೋಬ 1:2-4, 12).

*ದೇವರು ಕಠಿಣವಾದ ಆಜ್ಞೆಗಳಿಗೆ, ಅವುಗಳಲ್ಲಿ ಕೆಲವು ತಾರ್ಕಿಕವಲ್ಲದವುಗಳೆಂದು ಕಂಡರೂ ಅವುಗಳಿಗೆ ವಿಧೇಯರಾಗಬೇಕೆಂದು ಕೇಳುವ ಮೂಲಕ ಜನರನ್ನು ಪರೀಕ್ಷಿಸುತ್ತಾನೆ* (22:1, 2). ಅಬ್ರಹಾಮನಿಗಾದರೋ, ವಾಗ್ದಾನದ ಮಗನಾದ ಇಸಾಕನನ್ನು, ಒಂದು "ಸರ್ವಾಂಗಹೋಮ" ವಾಗಿ ಮೋರಿಯ ಬೆಟ್ಟದಲ್ಲಿ ಸಮರ್ಪಿಸಬೇಕೆಂದು ಯೆಹೋವನು ನೀಡಿದ ಆಜ್ಞೆಯಷ್ಟು ಹೆಚ್ಚು ಕಠಿಣವಾದ ಅಥವಾ ತಾರ್ಕಿಕವಲ್ಲದ ಸಂಗತಿ ಬೇರೊಂದಿರಲಿಲ್ಲ. ಹೇಗೂ, ದೇವರು ಮೂಲಪಿತೃವಿಗೆ ನೀಡಿದ ಮೊದಲನೆಯ ಕಠಿಣ ಆಜ್ಞೆಯು ಇದಾಗಿರಲಿಲ್ಲ. ಇವುಗಳೊಳಗೆ ಅನೇಕ ಪರಿಸ್ಥಿತಿಗಳಲ್ಲಿ "ಪರೀಕ್ಷೆ" ಎಂಬ ಪದವು ಕಾಣಿಸಿಕೊಳ್ಳುವದಿಲ್ಲವಾದರೂ, ಯೆಹೋವನು ವಾಸ್ತವಿಕದಲ್ಲಿ ಅಬ್ರಹಾಮನನ್ನು ಕಲ್ದೀಯರ ಊರ್ ಪಟ್ಟಣವನ್ನು ಬಿಟ್ಟು ಬರಬೇಕೆಂದು ಮತ್ತು ಪುನಃ ಹಾರಾನಿನಲ್ಲಿ ಕರೆದಾಗಲೇ ಅವನನ್ನು ಪರೀಕ್ಷಿಸುವ ಕೆಲಸವನ್ನು ಆರಂಭಿಸಿದ್ದನು. ಎರಡೂ ಸ್ಥಳಗಳಲ್ಲಿ, ದೇವರು ಅವನಿಗೆ ಅವನ ಕುಟುಂಬವನ್ನು ಬಿಟ್ಟು ಕಾನಾನ್ ದೇಶಕ್ಕೆ ಹೋಗುವಂತೆ ಹೇಳಿದನು (11:31; 12:1-4; ಅಪೊಸ್ತಲರ ಕೃತ್ಯಗಳು 7:2-4). ಆತನು ಎರಡೂ ಸಂದರ್ಭಗಳಲ್ಲಿ ಕೇವಲ ಭಾಗಶಃ ಮಾತ್ರವೇ ವಿಧೇಯನಾದನಾದ್ದರಿಂದ, ಅಂದರೆ ತನ್ನೊಂದಿಗೆ ಅವನ ಕುಟುಂಬದ ಕೆಲವರನ್ನು ಕರೆದುಕೊಂಡು ಅನೇಕ ವರ್ಷಗಳ ಕಾಲ ಹಾರಾನಿನಲ್ಲಿಯೇ ಉಳಿದು ಬಿಟ್ಟದ್ದರಿಂದ, ಆತನು ಈ ಪರೀಕ್ಷೆಗಳಲ್ಲಿ ಉತ್ತಮವಾಗಿ ಅಂಕಗಳನ್ನು ಗಳಿಸಲಿಲ್ಲ ಎಂದು ನಾವು ಹೇಳಬಹುದು.

ಮೂಲಪಿತೃವು ಅಂತಿಮವಾಗಿ ವಾಗ್ದಾನ ದೇಶವನ್ನು ತಲುಪಿದಾಗ, ಕ್ಷಾಮದ ಕಾರಣದಿಂದಾಗಿ ಆತನು ಅಲ್ಲಿ ಉಳಿದುಕೊಳ್ಳಲಿಲ್ಲ. ಆತನು ಐಗುಪ್ತಕ್ಕೆ ಹೋದನು, ಅಲ್ಲಿ ಆತನು ಫರೋಹನಿಗೆ ಸುಳ್ಳು ಹೇಳಿದನು, ಸಾರಳನ್ನು ತನ್ನ ಹೆಂಡತಿ ಎನ್ನುವ ಬದಲಾಗಿ ತನ್ನ ತಂಗಿ ಎಂದು ಹೇಳಿಕೊಂಡಿದ್ದನು (12:10-20). ಅನೇಕ ವರ್ಷಗಳ ನಂತರ, ಫಿಲಿಷ್ಟಿಯರ ಅರಸನಾದ ಗೆರಾರಿನ ಅಬೀಮೆಲೆಕನಿಗೆ ಇದೇ ಸುಳ್ಳನ್ನು ಪುನರಾವರ್ತಿಸಿದ್ದನು (20:1-18). ಆತನು ಈ ಎರಡೂ ಪರೀಕ್ಷೆಗಳನ್ನು ಅನುತ್ತೀರ್ಣನಾಗಿದ್ದನು.

ಅಲ್ಲದೆ, ಆತನು ತನ್ನ ದಾಸಿಯಾದ ಹಾಗರಳಲ್ಲಿ ಮಗನನ್ನು ಪಡೆಯುವಂತೆ ಸಾರಳು ಕೊಟ್ಟ ಯೋಜನೆಗೆ ಆತನು ಒಪ್ಪಿಸಿಕೊಂಡಿದ್ದನು (16:1-4). ಆತನಿಗೆ ತೊಂಭತ್ತೊಂಭತ್ತು ಮತ್ತು ಸಾರಳಿಗೆ ಎಂಭತ್ತೊಂಭತ್ತು ವರ್ಷವಾಗಿದ್ದ ವೇಳೆ, ದೇವರು ಅವರಿಗೆ ಮುಂದಿನ ವರ್ಷದಲ್ಲಿ ಒಬ್ಬ ಮಗನು ಹುಟ್ಟುವನೆಂದು ಹೇಳಿದನು, ದೈವಿಕ ಪ್ರಕಟನೆಗೆ ಆತನು ನೀಡಿದ ಪ್ರತಿಕ್ರಿಯೆಯೆಂದರೆ ಬೊರಲ ಬಿದ್ದವನಾಗಿ ಅಪನಂಬಿಕೆಯಿಂದ ನಕ್ಕನು. ಇಸ್ಮಾಯೇಲನನ್ನು ವಾಗ್ದಾನದ ಮಗುವಾಗಿ ಅಂಗೀಕರಿಸಿಕೊಳ್ಳಬೇಕೆಂದು ಆತನು ದೇವರನ್ನು ಬೇಡಿಕೊಂಡನು (17:15-19).

ಈ ಎಲ್ಲಾ ಉದಾಹರಣೆಗಳಲ್ಲಿ, ಅಬ್ರಹಾಮನು ದೈವಿಕ ಪರೀಕ್ಷೆಗಳಲ್ಲಿ ವಿಫಲನಾದನು. ಆತನು ದೇವರ ವಿರುದ್ಧವಾಗಿ ಅಪನಂಬಿಕೆಯಿಂದ ತನ್ನ ಹೃದಯವನ್ನು ಕಠಿಣಪಡಿಸಿಕೊಂಡ ಕಾರಣ ವಿಫಲನಾಗಲಿಲ್ಲ; ಅದಕ್ಕೆ ತದ್ವಿರುದ್ಧವಾಗಿ, ಆತನು ಆಗಲೂ ಯೆಹೋವನನ್ನು ನಂಬಿದ್ದನು ಮತ್ತು ಆತನ ಚಿತ್ತವನ್ನು ಮಾಡಬೇಕೆಂದು ಬಯಸಿದ್ದನು. ಹೇಗೂ, ಕಠಿಣವಾದ ಅಥವಾ ಅಪಾಯಕರ ಪರಿಸ್ಥಿತಿಗಳಲ್ಲಿ, ಮೂಲಪಿತೃವು ದೇವರ ಮಾರ್ಗಕ್ಕಿಂತಲೂ ತನ್ನ ಸ್ವಂತ ಮಾರ್ಗವು ಹೆಚ್ಚು ವಿವೇಕ, ತಾರ್ಕಿಕ, ಅಥವಾ ಸಮಯೋಚಿತವಾದದ್ದೆಂದು ಯೋಚಿಸುವಂತೆ ಕಂಡನು. ಆತನು "ನೋಡುವವನಾಗಿ ಅಲ್ಲ" ಬದಲಾಗಿ ಹೇಗೆ "ನಂಬುವವನಾಗಿ ನಡೆಯಬೇಕು" (2 ಕೊರಿಂಥ 5:7) ಎಂಬುದನ್ನು ಕಲಿಯಬೇಕಾಗಿತ್ತು.

ಈ ಅನಾದಿಕಾಲದ ಸಮಸ್ಯೆಯು ಈ ದಿನವೂ ನಮ್ಮೊಂದಿಗೆ ಇರುತ್ತದೆ. ನಾವು ಕೆಲವು ಸಾರಿ ನಮ್ಮ ಮುಂದಿರುವ ಅಪಾಯವನ್ನು ತಿಳಿಯಲು ವಿಫಲರಾಗುವದರಿಂದ ಅಥವಾ ಯೆಹೋವನು ನಮ್ಮ ಮುಂದೆ ಇಟ್ಟಿರುವ ದಾರಿಗಿಂತಲೂ ಅನುಸರಿಸಬೇಕಾದ ಉತ್ತಮ ದಾರಿಯೊಂದು ನಮಗೆ ಗೊತ್ತೆಂದು ಆತ್ಮವಿಶ್ವಾಸ ಹೊಂದಿರುವ ಕಾರಣದಿಂದ ಎಡವುತ್ತೇವೆ ಮತ್ತು ಬೀಳುತ್ತೇವೆ. ಜ್ಞಾನಿಯು ಅಭಿಪ್ರಾಯ ಪಟ್ಟದ್ದೇನೆಂದರೆ, "ಮನುಷ್ಯದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು. ಅದು ಕಟ್ಟಕಡೆಗೆ ಮರಣಮಾರ್ಗವೇ" (ಜ್ಞಾನೋಕ್ತಿ 14:12).

ಯೇಸುವು ತನ್ನ ಹಿಂಬಾಲಿಸುವವರಿಗೆ ಅನೇಕ ಸಾರಿ ಕಠಿಣವಾದ ಕಾರ್ಯಗಳನ್ನು ಮಾಡುವಂತೆ ಕೇಳಿದನು, ಅವುಗಳು ಮಾನವ ದೃಷ್ಟಿಕೋನದಿಂದ ನೋಡುವದಾದರೆ, ಅತ್ಯಂಥ ಕಠೋರ, ತಾರ್ಕಿಕವಲ್ಲದವುಗಳು, ಅಥವಾ ಅಸಾಧ್ಯವೆಂದು ಸಹ ಕಾಣಿಸುತ್ತಿದ್ದವು.

1. ಒಂದು ಸಂದರ್ಭದಲ್ಲಿ, ಆತನು ತನ್ನ ಶಿಷ್ಯನಾಗಬೇಕೆಂದು ಬಯಕೆಯನ್ನು ವ್ಯಕ್ತಪಡಿಸಿದ ಒಬ್ಬ ವ್ಯಕ್ತಿಯನ್ನು, "ನನ್ನನ್ನು ಹಿಂಬಾಲಿಸು" ಎಂದು ಹೇಳುವ ಮೂಲಕ ಪರೀಕ್ಷಿಸಿದನು. ಆ ವ್ಯಕ್ತಿಯ ಪ್ರತಿಕ್ರಿಯೆಯು ಏನಾಗಿತ್ತೆಂದರೆ, "ಸ್ವಾಮೀ, ನಾನು ಮೊದಲು ಹೋಗಿ ನನ್ನ ತಂದೆಯ ಉತ್ತರಕ್ರಿಯೆಗಳನ್ನು ಮಾಡಿಬರುವಂತೆ ನನಗೆ ಅಪ್ಪಣೆಯಾಗಬೇಕು." ಅದಕ್ಕೆ ಯೇಸುವು ಅವನಿಗೆ ಚೇಮಾರಿ ಹಾಕುತ್ತಾ ಹೇಳಿದ್ದೇನೆಂದರೆ, "ಸತ್ತವರೇ ತಮ್ಮವರಲ್ಲಿ ಸತ್ತುಹೋದವರ ಉತ್ತರಕ್ರಿಯೆಗಳನ್ನು ಮಾಡಲಿ, ನೀನಂತೂ ಹೋಗಿ ದೇವರ ರಾಜ್ಯವನ್ನು ಪ್ರಸಿದ್ಧಿಪಡಿಸು" (ಲೂಕ 9:59, 60). ಪ್ರಾಚೀನ ಮಧ್ಯಪ್ರಾಚ್ಯದಲ್ಲಿ, ಒಬ್ಬನ ಅತ್ಯಂಥ ಪವಿತ್ರವಾದ ಹೊಣೆಗಾರಿಕೆಗಳಲ್ಲೊಂದು ಎಂದರೆ ತಂದೆತಾಯಿಗಳಿಗೆ, ಸೂಕ್ತವಾದ ರೀತಿಯಲ್ಲಿ ಸಮಾಧಿ ಮಾಡುವ ಮೂಲಕವಾಗಿ ಅವರಿಗೆ ಸಲ್ಲತಕ್ಕ ಗೌರವವನ್ನು ತೋರಿಸುವುದು ಆಗಿತ್ತು. ಖಂಡಿತವಾಗಿಯೂ, ಆ ವ್ಯಕ್ತಿಯ ತಂದೆಯು ನಿಜವಾಗಿಯೂ ಮರಣಿಸಿದ್ದನೋ, ಮರಣದ ಸಮೀಪವಾಗಿದ್ದನು, ಅಥವಾ ಪರಿಪೂರ್ಣ ಆರೋಗ್ಯದಲ್ಲಿದ್ದನೋ ಎಂಬುದು ನಮಗೆ ತಿಳಿಯದು. ಈ ವ್ಯಕ್ತಿಯು ಶಿಷ್ಯತ್ವಕ್ಕೆ ಬರುವಂತೆ ನೀಡಿದ ಕರೆಯನ್ನು ತಪ್ಪಿಸಿಕೊಳ್ಳಲು ತನ್ನ ತಂದೆಯನ್ನು ಕೇವಲ ಒಂದು ನೆಪವಾಗಿ ಬಳಸಿಕೊಂಡಿರಬಹುದು; ಆದರೆ ವಿಷಯವು ಏನೇ

ಆಗಿದ್ದರೂ ಸರಿಯೇ, ದೇವರ ರಾಜ್ಯಕ್ಕೆ ಆದ್ಯತೆಯು ಇರಬೇಕು, ಕುಟುಂಬದ ಜವಾಬ್ದಾರಿಗಳಿಗಿಂತಲೂ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಎಂಬುದಾಗಿ ಯೇಸುವು ಘೋಷಿಸಿದನು.

2. ಯೇಸುವು ಭಾವಿ ಹಿಂಬಾಲಕರನ್ನು ಪರೀಕ್ಷಿಸುವದಕ್ಕಾಗಿ ನೀಡಿದ ಆಘಾತಕಾರಿ ಘೋಷಣೆಯೆಂದರೆ ಇದೇ: "ಯಾವನಾದರೂ ನನ್ನ ಬಳಿಗೆ ಬಂದು ತನ್ನ ತಂದೆ ತಾಯಿ ಹೆಂಡತಿ ಮಕ್ಕಳು ಅಣ್ಣತಮ್ಮಂದಿರು ಅಕ್ಕತಂಗಿಯರು ಇವರನ್ನೂ ತನ್ನ ಪ್ರಾಣವನ್ನು ಸಹ ಹಗೆಮಾಡದಿದ್ದರೆ ಅವನು ನನ್ನ ಶಿಷ್ಯನಾಗಿರಲಾರನು" (ಲೂಕ 14:26). ಹೇಗೂ, ಮತ್ತಾಯನು ಯೇಸುವಿನ ಹೇಳಿಕೆಗೆ ಸಮಾನಾರ್ಥವಾದ ಮತ್ತೊಂದು ಹೇಳಿಕೆಯನ್ನು ಒದಗಿಸುವವನಾಗಿದ್ದು, ಅದು ಆತನ ಶ್ರೋತೃಗಳಿಗೆ ಸ್ವಲ್ಪ ಕಡಿಮೆ ಆಘಾತಕಾರಿಯಾಗಿ ಅನ್ನಿಸಿತ್ತು, ಆದರೆ ಬೇಡಿಕೆಯಲ್ಲಂತೂ ಕಡಿಮೆಯಿರಲಿಲ್ಲ. ಆದದರಿಂದ, ಲೂಕನು ಬಳಸುವಂತೆ "ಹಗೆಮಾಡು" ಎಂಬ ಪದವನ್ನು ಬಳಸುವದರ ಬದಲಾಗಿ, ಈತನ ಕಥನವು ಈ ಕೆಳಗಿನ ಮಾತುಗಳಲ್ಲಿ ವ್ಯಕ್ತಪಡಿಸಲ್ಪಟ್ಟಿದೆ: "ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ" (ಮತ್ತಾಯ 10:37). ಹಾಗೆ ಮಾಡುವ ಮೂಲಕ, ಮತ್ತಾಯನು ಇಬ್ರಿಯ ವಾಕ್ಯದಲ್ಲಿ שָׂנֵא *(ಸಾನೆ)* ಎಂಬ ಪದದ ಬಳಕೆಗೆ ದೃಷ್ಟಾಂತವನ್ನು ನೀಡುತ್ತಾನೆ, ಅದು ಸ್ಪಷ್ಟವಾಗಿರುವಂತೆ ಹೊಸ ಒಡಂಬಡಿಕೆಯ "ಹಗೆಮಾಡು" ಎಂಬ ಪದದ ಹಿಂದಿರುವಂಥದ್ದಾಗಿದೆ. ಕೆಲವು ಪರಿಸ್ಥಿತಿಗಳಲ್ಲಿ *ಸಾನೆ* ಎಂಬುದರ ಅರ್ಥವು "ಕಡಿಮೆ ಪ್ರೀತಿಸು" ಎಂದಾಗಿರುತ್ತದೆ, ಹೊರತು ಒಬ್ಬ ವ್ಯಕ್ತಿಯ ಕಡೆಗೆ ವಾಸ್ತವಿಕವಾದ ವೈರತ್ವ, ಕೆಟ್ಟಭಾವನೆ, ದ್ವೇಷವನ್ನು ಹೊಂದಿರುವದು ಎಂದಲ್ಲ. ಆದದರಿಂದ, KJVಯ ಅನುವಾದಕರು ಆದಿಕಾಂಡ 29:31, 33ರಲ್ಲಿ ಯಾಕೋಬನು ಲೇಯಳನ್ನು "ಹಗೆಮಾಡಿದನು" *(ಸಾನೆ)* ಎಂದು ಹೇಳುವ ಮೂಲಕ ಅವರ ವಾಚಕರಿಗೆ ಅಪಕಾರ ಮಾಡಿರುತ್ತಾರೆ. ವಾಸ್ತವಿಕದಲ್ಲಿ, 29:30ನೇ ವಚನವು ಸ್ಪಷ್ಟವಾಗಿ ಸೂಚ್ಯಾರ್ಥವನ್ನು ನೀಡುವದೇನೆಂದರೆ ಯಾಕೋಬನು ಲೇಯಳನ್ನು ಪ್ರೀತಿಸಿದನು, ಆದರೆ ರಾಹೇಳನ್ನು ಆತನು ಪ್ರೀತಿಸುತ್ತಿದ್ದಷ್ಟರ ಮಟ್ಟಿಗೆ ಲೇಯಳನ್ನು ಪ್ರೀತಿಸಲಿಲ್ಲ ಎಂಬುದೆ. ಹೀಗೆ, ಯೇಸುವು ಮೇಲೇ ಹೇಳಿದ ಮಾತಿನ ಅರ್ಥವು ಏನೆಂದರೆ ನಾವು ಕರ್ತನ ಕಡೆಗೆ ಹೊಂದಿರುವ ಸಮರ್ಪಣೆಗಿಂತಲೂ ಹೆಚ್ಚಿನ ಆದ್ಯತೆಯನ್ನು ಯಾರೊಬ್ಬರಿಗೂ - ತಂದೆತಾಯಿಗಳು, ಒಡಹುಟ್ಟಿದವರು - ತೆಗೆದುಕೊಳ್ಳಕೂಡದು ಎಂಬುದೆ.

3. ಯೇಸುವಿನ ಶಿಷ್ಯರಿಗೆ ಸವಾಲನ್ನೊಡ್ಡಿದ ಇನ್ನಷ್ಟು ಪರೀಕ್ಷೆಯು ಏನೆಂದರೆ ಆತನು ಮುಂದಿಟ್ಟ ಹೌಹಾರಿಸುವಂಥ ಬೇಡಿಕೆ, "ಯಾವನಿಗಾದರೂ ನನ್ನ ಹಿಂದೆ ಬರುವದಕ್ಕೆ ಮನಸ್ಸಿದ್ದರೆ ಅವನು ತನ್ನನ್ನು ನಿರಾಕರಿಸಿ ತನ್ನ ಶಿಲುಬೆಯನ್ನು ಹೊತ್ತುಕೊಂಡು ನನ್ನ ಹಿಂದೆ ಬರಲಿ. ತನ್ನ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದಿರುವವನು ಅದನ್ನು ಕಳಕೊಳ್ಳುವನು; ಆದರೆ ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು" (ಮತ್ತಾಯ 16:24, 25). ಶಿಲುಬೆಯು ದಾಸರು, ಬಂಡಾಯಗಾರರು, ಪರದೇಶಿಯರು, ಹಾಗೂ ಅತ್ಯಂಥ ಘೋರ ಅಪರಾಧಿಗಳಿಗೋಸ್ಕರ ರೋಮನ್ನರು ಮೀಸಲಾಗಿಟ್ಟಿದ್ದ ಪೀಡನೆ ಹಾಗೂ ಮರಣದ ಸಾಧನವಾಗಿತ್ತು. ಈ ಹೇಳಿಕೆಯು ಅಪೊಸ್ತಲರು ನಿರೀಕ್ಷೆ ಮಾಡುತ್ತಿದ್ದ ಮತ್ತು ದೇವರ ರಾಜ್ಯದಲ್ಲಿ ಎದುರು ನೋಡುತ್ತಿದ್ದ ಎಲ್ಲದಕ್ಕೆ ವಿರುದ್ಧವಾದದ್ದಾಗಿತ್ತು. ಅವರು ದೈವಿಕ ಆಶೀರ್ವಾದಗಳನ್ನು, ಐಶ್ವರ್ಯಗಳನ್ನು, ಮೆಸ್ಸೀಯನಾದ ಯೇಸುವಿನ ಬಲ ಹಾಗೂ ಎಡಭಾಗಗಳಲ್ಲಿ ಸಿಂಹಾಸನಗಳು ಸಿಕ್ಕುವವೆಂದು ಅಪೇಕ್ಷಿಸುತ್ತಿದ್ದರು. ಶಿಲುಬೆಯ ಮೇಲೆ

ಬಾಧೆಯನ್ನನುಭವಿಸುವದಂತೂ ಅವರ ಮನಸ್ಸಿಗಳಿಗೆ ಬಹುದೂರದ ಮಾತಾಗಿತ್ತು.

ಈ ಸತ್ಯವು ಯೇಸುವಿನ ಶಿಷ್ಯರಿಗೆ ಗ್ರಹಿಸಿಕೊಳ್ಳಲು ಬಹಳ ಕಷ್ಟಕರವಾಗಿತ್ತು. ಹಲವಾರು ಸಂದರ್ಭಗಳಲ್ಲಿ, ಕರ್ತನು ಅವರಲ್ಲಿರುವ ಅಲ್ಪ ನಂಬಿಕೆ ಮತ್ತು ತಿಳುವಳಿಕೆಗಳ ನಿಮಿತ್ತವಾಗಿ ಅವರನ್ನು ಗದರಿಸಿ ಸರಿಪಡಿಸಬೇಕಾಗಿ ಬಂದಿತ್ತು. ಹಾಗಾದರೆ, ವಿಶ್ವಾಸಿಸುವವರಿಗೆ ಪಿತೃವಾಗಿ ಸಕಲ ಮಾನವರಿಗೆ ಒಂದು ಆಶೀರ್ವಾದನಿಧಿಯಾಗಿರಬೇಕು ಎಂಬ ತನ್ನ ಕರೆಯುವಿಕೆಯನ್ನು ಅರ್ಥಮಾಡಿಕೊಳ್ಳಲು ಅಬ್ರಹಾಮನಿಗೆ ಅಷ್ಟೊಂದು ವರ್ಷಗಳ ಹಿಡಿದಿದ್ದವು ಎಂಬುದು ನಮಗೆ ಆಶ್ಚರ್ಯವೇನಿಸಕೂಡದು (ರೋಮಾ 4:16). ಆದಿಕಾಂಡದ ವಾಕ್ಯದಿಂದ, ಆತನು ಮಾರ್ಗದರ್ಶನ, ಗದರಿಕೆ, ಅಥವಾ ವಾಗ್ದಾನವನ್ನು ನೀಡುವಂಥ ದೇವರ ಸ್ವರವನ್ನು ಕೇಳಿಸಿಕೊಳ್ಳದೆ ಅನೇಕ ವರ್ಷಗಳನ್ನು ಕಳೆದಿರಬಹುದು ಎಂದು ಕಾಣಿಸುತ್ತದೆ; ಆದ್ದರಿಂದ ಯಾವಾಗಲಾದರೊಮ್ಮೆ ದೈವಿಕ ಅಪ್ಪಣೆಗಳನ್ನು ಪಡೆದುಕೊಳ್ಳುತ್ತಾ ನಂಬುವವನಾಗಿಯೇ ಆತನು ನಡೆಯುವದನ್ನು ಕಲಿತುಕೊಳ್ಳಬೇಕಾಗಿತ್ತು.

ಆತನ ಆತ್ಮೀಕ ಶಿಕ್ಷಣದ ಸ್ವಭಾವವು ಮೂಲಪಿತೃವಿನ ವಿಷಯದಲ್ಲಿ ದೇವರು ಏಕೆ ಅಷ್ಟೊಂದು ತಾಳ್ಮೆ ಮತ್ತು ದೀರ್ಘಶಾಂತನಾಗಿ ಇದ್ದನು ಎಂಬುದನ್ನು ಅರ್ಥಮಾಡಿಕೊಳ್ಳುವಂತೆ ನಮಗೆ ಸಹಾಯವನ್ನು ಮಾಡಬಲ್ಲದು. ಆತನು ಮಾನವಕುಲದ “ನಕ್ಷತ್ರ ಪ್ರಕಾಶ” ದಲ್ಲಿ[17] ಜೀವಿಸುವವನಾಗಿ ಮಿತಿಯುಳ್ಳ ಪ್ರಮಾಣದಲ್ಲಿನ ದೈವಿಕ ಸತ್ಯ, ಜೀವಿಸುವಿಕೆಯನ್ನು ಮಾತ್ರವೇ ಹೊಂದಿದ್ದನು. ನಂಬಿಕೆಗಳಲ್ಲಿ ದೋಷಗಳನ್ನು ಮತ್ತು ವಿಧೇಯತೆಯಲ್ಲಿ ವಿಫಲತೆಗಳನ್ನು ಹೊಂದಿದ್ದ ಈ ವ್ಯಕ್ತಿಯು ಹೇಗೆ ಮುಂದೆ ಎಂದಾದರೂ “ನಂಬುವವರಿಗೆ ತಂದೆ” ಯಾಗಿ ಮಾರ್ಪಟ್ಟನು? ಅಬ್ರಹಾಮನು ಯೆಹೋವನಲ್ಲಿ ನಂಬಿಕೆಯಿಡುವದನ್ನು ಎಂದಿಗೂ ನಿಲ್ಲಿಸಲಿಲ್ಲ, ಕೆಲವು ಸಂದರ್ಭಗಳಲ್ಲಿ ಅವನ ನಂಬಿಕೆಯು ದುರ್ಬಲವಾಗಿದ್ದರೂ ಆತನು ನಂಬಿಕೆಯಿಡುವದನ್ನು ನಿಲ್ಲಿಸಲಿಲ್ಲ. ಆತನು ದೇವರ ಕೈಯನ್ನು ಎಂದಿಗೂ ಬಿಡಲಿಲ್ಲ, ಹಾಗೆಯೇ ಯೆಹೋವನು ಸಹ ಅವನ ಕೈಯನ್ನು ಬಿಟ್ಟಿರಲಿಲ್ಲ. ಆತನು ತನ್ನ ಸ್ವಂಥ ಯೋಜನೆಗಳಿಗಿಂತಲೂ ದೇವರಲ್ಲಿ ಹೆಚ್ಚು ವಿಶ್ವಾಸವನ್ನಿಡುವ ಅಗತ್ಯವಿತ್ತೆಂಬುದು ಸತ್ಯವೇ ಆಗಿತ್ತು - ಆದರೆ ಲೋಕದ ಇತಿಹಾಸದಲ್ಲಿ, ವಿಶ್ವಾಸಿಯು ಬೇರೆ ಇನ್ನೇನನ್ನು ಹೇಳಿಕೊಳ್ಳಲು ಸಾಧ್ಯ? ಅಂತಿಮ ವಿಶ್ಲೇಷಣೆಗಳಲ್ಲಿ, ಆತನು ದೇವರ ಮೇಲಿನ ಭರವಸನ್ನು ಎಂದಿಗೂ ಬಿಡಲಿಲ್ಲ, ಮತ್ತು ಯೆಹೋವನು ಆತನ ಮೇಲಿರುವ ಭರವಸವನ್ನು ಸಹ ಎಂದಿಗೂ ಬಿಡಲಿಲ್ಲ.

ಒಬ್ಬ ವ್ಯಕ್ತಿಯು ಎಷ್ಟು ಸಾರಿ ಎಡುವುತ್ತಾನೆ ಮತ್ತು ಬೀಳುತ್ತಾನೆ ಎಂಬುದಲ್ಲ; ಆತನು ಮೇಲೆದ್ದು, ತನ್ನ ವಿಫಲತೆಗಳಿಂದ ಪಾಠವನ್ನು ಕಲಿತುಕೊಳ್ಳುವುದು, ಮತ್ತು ಕ್ರಮೇಣವಾಗಿ ದೇವರೊಂದಿಗಿನ ತನ್ನ ನಡೆಯಲ್ಲಿ ಹೆಚ್ಚು ಬಲಿಷ್ಠ ಮತ್ತು ನಂಬಿಗಸ್ತನಾಗುತ್ತಾನೆ ಎಂಬುದೇ ಮುಖ್ಯವಾಗಿರುತ್ತದೆ. ಕೆಲವು ಜನರು ತಮ್ಮ ತಪ್ಪುಗಳಿಂದ ಎಂದಿಗೂ ಪಾಠಗಳನ್ನು ಕಲಿಯುವದಿಲ್ಲವಾದರು, ಅಬ್ರಹಾಮನಂತೂ ಕಲಿತುಕೊಂಡನು. ದೇವರು ಅಂತಿಮವಾದ ಪರೀಕ್ಷೆಯನ್ನು ನಡಿಸುವಂತೆ - ಇಸಾಕನನ್ನು ಯಜ್ಞಮಾಡುವಂತೆ - ಆಜ್ಞೆಯನ್ನು ಕೊಟ್ಟ ವೇಳೆ ಮೂಲಪಿತೃವು ಯೆಹೋವನಲ್ಲಿಟ್ಟಿದ್ದ ನಂಬಿಕೆಯು ಎಷ್ಟರ ಮಟ್ಟಿಗೆ ಬೆಳೆದಿತ್ತೆಂದರೆ ಎಲ್ಲಾ ವಿಧದಲ್ಲಿಯೂ ಆತನ ಅಪ್ಪಣೆಗಳನ್ನು ಅನುಸರಿಸುವದಕ್ಕೆ ತಡಮಾಡಲಿಲ್ಲ. ಆತನು ಹಾಗೂ ಸಾರಳು ಯೆಹೋವನಿಂದ ಈಗಾಗಲೇ ಅದ್ಭುತವನ್ನು ಅನುಭವಿಸಿದ್ದರು, ಆತನು ಅವರ ವಯಸ್ಸಾದ ದೇಹಗಳಿಗೆ ಹೊಸ ಶಕ್ತಿ ಮತ್ತು ಸಮರ್ಥತೆಯನ್ನು ಕೊಟ್ಟಿದ್ದನು, ಅದರ ಫಲಿತವಾಗಿ ಇಸಾಕನ ಜನನವಾಗಿತ್ತು. ತಾನು ಎಲ್ಲಾ ದೈವಿಕ ವಾಗ್ದಾನಗಳಿಗೆ

ಬಾಧ್ಯಸ್ಥನಾಗಿರುವ ತನ್ನ ಮಗನನ್ನು ಕೊಲ್ಲಬೇಕಾಗಿ ಬಂದರೂ, ಯೆಹೋವನು ನಿಶ್ಚಯವಾಗಿಯೂ ಅವನನ್ನು ಸತ್ತವರೊಳಗಿಂದ ಎಬ್ಬಿಸುವನು ಎಂದು ಅಬ್ರಹಾಮನು ನಂಬಿದ್ದನು (ಇಬ್ರಿಯ 11:17-19). ಈ ವಿಧವಾದ ನಂಬಿಕೆಯು ಅಬ್ರಹಾಮನಲ್ಲಿ ರಾತ್ರೋರಾತ್ರಿ ಸಂಭವಿಸಿ ಬಿಡಲಿಲ್ಲ, ಅದು ಇಂದು ಕ್ರೈಸ್ತರಿಗೂ ಆ ವಿಧದಲ್ಲಿ ಸಂಭವಿಸುವದಿಲ್ಲ. ಒಬ್ಬನು ಹೇಗೆ ಓಟವನ್ನು ಆರಂಭಿಸಿದನು ಅಥವಾ ಓಟದ ನಡುವೆ ತಪ್ಪು ಹೆಜ್ಜೆಗಳನ್ನು ಇಟ್ಟನೋ ಎಂಬುದಲ್ಲ, ಆದರೆ ಆತನು ಓಟವನ್ನು ಹೇಗೆ ಮುಗಿಸುತ್ತಾನೆಂಬುದೇ ಸರ್ವ-ಪ್ರಾಮುಖ್ಯತೆಯುಳ್ಳದ್ದು (2 ತಿಮೊಥೆ 4:5-8).

*ದೇವರು ವಿಶ್ವಾಸಿಯನ್ನು ಪರೀಕ್ಷಿಸಲ್ಪಡುವಂತೆ ಅಥವಾ ಪರಿಶೋಧಿಸಲ್ಪಡುವಂತೆ ಅನುಮತಿಸುವಾಗ, ಅವರು ಸಮಜಾಯಿಷಿಗಳ ಬದಲಾಗಿ ಆತನ ವಾಗ್ದಾನಗಳ ಮೇಲೆ ಮುಖ್ಯ ಗಮನವನ್ನು ಹರಿಸತಕ್ಕದ್ದು* (22:3-5). ಅನೇಕ ಸಮಯಗಳಲ್ಲಿ, ತನ್ನ ಜನರು ಕಠಿಣ ಪರೀಕ್ಷೆಗಳ ಕೆಳಗಿರುವ ವೇಳೆ ಯಾವದೇ ಸಮಜಾಯಿಷಿಗಳಿಲ್ಲದೆಯೇ ಸಹಿಸಿಕೊಳ್ಳಬೇಕೆಂದು ಕರ್ತನು ಎದುರು ನೋಡುತ್ತಾನೆ. ಅಬ್ರಹಾಮನು ಏಕೆ ತನ್ನ ಮಗನನ್ನು ಸರ್ವಾಂಗಹೋಮವಾಗಿ ಸಮರ್ಪಿಸಬೇಕೆಂಬುದಕ್ಕೆ ದೇವರು ಆತನಿಗೆ ಯಾವದೇ ದೈವಿಕ ಕಾರಣಗಳನ್ನು ನೀಡಿದ್ದನೋ ಎಂಬದನ್ನು ಲೇಖಕನು ತಿಳಿಯಪಡಿಸುವದಿಲ್ಲ; ಮೂಲಪಿತೃವು ಯೆಹೋವನಿಂದ ಅಂತಹ ಯಾವದೇ ಕಾರಣವನ್ನು ಪಡೆದುಕೊಳ್ಳಲಿಲ್ಲ ಎಂದು ಕಾಣಿಸುತ್ತದೆ. ಈ ಪರಿಸ್ಥಿತಿಯು ಸೊದೋಮ ಮತ್ತು ಗೊಮೋರ ಪಟ್ಟಣಗಳ ನಾಶನಕ್ಕೆ ವಿರುದ್ಧ ಹೋಲಿಕೆಯಲ್ಲಿರುತ್ತದೆ. ದೇವರು ಆ ಪಟ್ಟಣಗಳನ್ನು ನಾಶ ಮಾಡುವದರ ಬಗ್ಗೆ ಮೂಲಪಿತೃವು ಪ್ರಶ್ನೆಯನ್ನು ಮಾಡಿದಾಗ, ತಾನು ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವವನಾಗಿ ಒಂದು ಅನೀತಿಕರವಾದ ವಿಧದಲ್ಲಿ ನಡೆದುಕೊಳ್ಳುವದಿಲ್ಲ ಎಂಬುದಾಗಿ ಯೆಹೋವನು ಅವನಿಗೆ ಹಲವಾರು ಸಾರಿ ಭರವಸ ಕೊಟ್ಟನು (18:22-33).

ದೇವರು ಜೀವ ಮತ್ತು ಸಮಸ್ತ ಸಂಗತಿಗಳ ಸೃಷ್ಟಿಕರ್ತನಾಗಿದ್ದು, ನಮ್ಮ ಪ್ರಶ್ನೆಗಳಿಗೆ ಯಾವದೇ ಉತ್ತರಗಳನ್ನು ಕೊಡುವ ಹಂಗಿನಲ್ಲಿರುವದಿಲ್ಲ. ವಿಶ್ವದ ಸಾರ್ವಭೌಮ ದೇವರಾಗಿ, ತನ್ನ ಕೃತ್ಯಗಳ ಬಗ್ಗೆ ದುರ್ಬಲರಾದ, ಪಾಪಭರಿತ ಮಾನವ ಜೀವಿಗಳಿಗೆ ವಿವರಿಸಿಕೊಳ್ಳುವ ಹೊಣೆಯನ್ನು ಹೊಂದಿರುವದಿಲ್ಲ. ಹಾಗಿದ್ದಾಗ್ಯೂ, ಮಹಾ ಕಠಿಣತೆ ಹಾಗೂ ಘೋರವಾದ ಪರೀಕ್ಷೆಯ ಕಾಲಗಳಲ್ಲಿ ತನ್ನ ಆಜ್ಞೆಗಳಿಗೆ ಕಾರಣವೇನೆಂಬುದನ್ನು ಆತನು ಕೆಲವು ಸಾರಿ ವಿವರಿಸಿದನು. ಉದಾಹರಣೆಗೆ, ಮಾನವರು ತಮ್ಮನ್ನು ಕೆಟ್ಟತನಕ್ಕೂ ಹಿಂಸೆಗೂ ಒಪ್ಪಿಸಿಕೊಂಡಿರುವ ಕಾರಣದಿಂದಾಗಿ ಮಾನವರನ್ನು ನಾಶಗೊಳಿಸುವದಕ್ಕೆ ಭೂಮಿಯ ಮೇಲೆ ಮಹಾ ಪ್ರಳಯವನ್ನು ಬರಮಾಡುವೆನು ಎಂಬುದಾಗಿ ದೇವರು ನೋಹನಿಗೆ ವಿವರಿಸಿದನು. ಈ ನೀತಿವಂತ ವ್ಯಕ್ತಿಯು ಒಂದು ತಾನು ಹಾಗೂ ತನ್ನ ಕುಟುಂಬದವರು ಬರಲಿರುವ ವಿನಾಶತೆಯಿಂದ ತಪ್ಪಿಸಿಕೊಂಡು ಬದುಕುಳಿಯುವಂತೆ ಒಂದು ನಾವೆಯನ್ನು ಕಟ್ಟಬೇಕೆಂದು ಈತನಿಗೆ ಅಪ್ಪಣೆ ಕೊಟ್ಟನು (6:8-22). ಅದೇ ರೀತಿಯಲ್ಲಿಯೇ, ದೇವರು ಸ್ವಲ್ಪ ಕಾಲದಲ್ಲಿ ಫರೋಹನು ತನ್ನ ಜನರನ್ನು ದಾಸತ್ವದಿಂದ ಬಿಡುಗಡೆಗೊಳಿಸುವಂತೆ ಮಾಡುವದಕ್ಕಾಗಿ ಐಗುಪ್ತದ ಮೇಲೆ ತಾನು ಉಪದ್ರವಗಳನ್ನು ಕಳುಹಿಸಲಿದ್ದೇನೆ ಎಂಬುದಾಗಿ ಮೋಶೆಗೆ, ಆತನ ಮೂಲಕ ಇಸ್ರಾಯೇಲ್ಯರಿಗೆ ತಿಳಿಯಪಡಿಸಿದನು (ವಿಮೋಚನಕಾಂಡ 6:1-9; 7:14-12:41). ಚೊಚ್ಚಲ ಮಕ್ಕಳಿಗೆ ಮರಣವುಂಟಾಗುವಂಥ ದೇಶದಲ್ಲೆಲ್ಲಾ ವ್ಯಾಪಿಸುವ ಅಂತಿಮ ಉಪದ್ರವವನ್ನು ತಪ್ಪಿಸಿಕೊಳ್ಳಬೇಕಾದರೆ, ವಿಶ್ವಾಸಿಸುವ ಪ್ರತಿಯೊಂದು ಮನೆಯವರು ಒಂದು ಕುರಿಮರಿಯನ್ನುಕೊಯ್ದು ಅದರ ರಕ್ತವನ್ನು ಬಾಗಿಲು ಪಟ್ಟಿಗಳಿಗೂ ನಿಲುವುಗಂಬಗಳಿಗೂ

ಪ್ರೋಕ್ಷಿಸಬೇಕಿತ್ತು. ಆ ಬಳಿಕ ಅವರು ಪ್ರಾಣಿಯನ್ನು ಸುಟ್ಟು ತಿನ್ನಬೇಕಾಗಿತ್ತು, ಹೀಗೆ ಪ್ರಯಾಣಕ್ಕೆ ತಮ್ಮನ್ನು ಸಿದ್ಧಗೊಳಿಸಿಕೊಂಡಿರಬೇಕಿತ್ತು. ಅಂತಿಮವಾಗಿ, ಅವರು ಮುಂಜಾನೆಯ ತನಕ ತಮ್ಮ ಮನೆಗಳಲ್ಲಿ ಉಳಿದುಕೊಂಡಿರಬೇಕಿತ್ತು, ಆಗ ಉಪದ್ರವವು ಅವರನ್ನು ದಾಟಿಕೊಂಡು ಹೋಗಿರುತ್ತಿತ್ತು.

ಈಗ, ಇವೆಲ್ಲವುಗಳನ್ನು ಇಸ್ರಾಯೇಲ್ಯರಿಗೆ ವಿವರಿಸುವದು ಅವಶ್ಯಕವಾಗಿತ್ತು ಯಾಕೆಂದರೆ, ನಾನ್ನೂರು ವರ್ಷಗಳ ಬಳಿಕ, ಅವರಲ್ಲಿ ಅಬ್ರಹಾಮ, ಇಸಾಕ, ಯಾಕೋಬರ ದೇವರ ಕುರಿತಾದ ಮಂದವಾದ ನೆನಪು ಮಾತ್ರವೇ ಉಳಿದುಕೊಂಡಿತ್ತು. ಅದರ ಒಂದು ಫಲಿತವಾಗಿ, ಏಕೈಕ ಸತ್ಯ ದೇವರ ಕಡೆಗೆ ಇಬ್ರಿಯರು ಹೊಂದಿದ್ದ ಸಮರ್ಪಣೆಯು ಬಹಳವಾಗಿ ಕ್ಷೀಣಿಸಿತ್ತು, ಮತ್ತು ಅವರು ವಿಗ್ರಹಾರಾಧನೆಗೆ ತಿರುಗಿಕೊಂಡು ಐಗುಪ್ತದ ದೇವರುಗಳನ್ನು ಆರಾಧಿಸುತ್ತಿದ್ದರು (ಯೆಹೋಶುವ 24:14). ಆದದರಿಂದ, ದೇವರು ತಾನು ಅವರನ್ನು ಫರೋಹನ ರೌದ್ರದಿಂದ ಬಿಡುಗಡೆಗೊಳಿಸಿ ವಾಗ್ದಾನದ ದೇಶಕ್ಕೆ ಕರೆದೊಯ್ಯಲು ಶಕ್ತನು ಎಂಬುದನ್ನು ಅವರಿಗೆ ಅದ್ಭುತಗಳ ಮೂಲಕವಾಗಿ ಸಾಭಿತುಪಡಿಸುವದು ಅಗತ್ಯವಿತ್ತು. ಯೆಹೋವನು ತಾನು ಅವರ ಮೂಲಪಿತೃಗಳಿಗೆ ಶತಮಾನಗಳ ಮುಂಚೆ ಮಾಡಿದ್ದ ಒಡಂಬಡಿಕೆಯ ವಾಗ್ದಾನಗಳನ್ನು ಈ ವಿಧದಲ್ಲಿಯೇ ನೆರವೇರಿಸಬೇಕೆಂದು ನಿರ್ಣಯಿಸಿಕೊಂಡಿದ್ದನು.

ಹೇಗೂ, ಅಬ್ರಹಾಮನಿಗೆ ದೇವರ ಆಜ್ಞೆಯ ಬಗ್ಗೆ ವಿವರಣೆಯು ಅಗತ್ಯವಿರಲಿಲ್ಲ ಯಾಕೆಂದರೆ ಆತನು ಅನೇಕ ದಶಕಗಳಿಂದಲೂ ದೇವರೊಂದಿಗೆ ನಿಕಟವಾದ ಸಂಬಂಧವನ್ನು ಬೆಳೆಸಿಕೊಂಡಿದ್ದನು. ಆತನು ದೇವರ ಸಮೃದ್ಧವಾದ ಆಶೀರ್ವಾದಗಳನ್ನು, ಕರುಣೆ, ಕೃಪೆಗಳನ್ನು ಕಂಡಿದ್ದನು; ಮತ್ತು ತನ್ನ ಸಂತಾನದ (ಇಸಾಕ) ಮೂಲಕವಾಗಿ ಭೂಲೋಕದ ಸಕಲ ಕುಟುಂಬಗಳಿಗೆ ಆಶೀರ್ವಾದವುಂಟಾಗುವದು ಎಂಬ ಯೆಹೋವನ ವಾಗ್ದಾನದಲ್ಲಿ ವಿಶ್ವಾಸವಿಟ್ಟಿದ್ದನು (17:19, 21; 18:9-14; 21:12). ಈ ದೈವಿಕ ವಾಗ್ದಾನದಲ್ಲಿ ಆತನಿಗೆ ನಂಬಿಕೆಯಿತ್ತಾದ್ದರಿಂದ, ಅಬ್ರಹಾಮನ ಯಾವದೇ ವಿಳಂಬ ಮಾಡದೆ ಯಜ್ಞವೇದಿಯ ಮೇಲೆ ಇಸಾಕನನ್ನು ಸಮರ್ಪಿಸುವದಕ್ಕೆ ಸಿದ್ಧನಾಗಿದ್ದನು (ರೋಮಾ 4:16, 20, 21). ಬಹುಶಃ ಅತ್ಯಂಥ ಆಶ್ಚರ್ಯಕರ ವಾಸ್ತವಾಂಶವು ಏನೆಂದರೆ ಆತನು ಯೆಹೋವನ ಮೇಲೆ ಅಸಮಾಧಾನ ಪಟ್ಟುಕೊಳ್ಳದೆಯೇ ತನ್ನ ಮಗನನ್ನು ಕೊಲ್ಲಲು ಶಕ್ತನಾಗಿದ್ದನು ಎಂಬುದೇ; ಆತನು ಆ ಯಜ್ಞವನ್ನು ಒಂದು ಆರಾಧನೆಯ ಕ್ರಿಯೆಯಾಗಿ ಅನುಸರಿಸುವರಕ್ಕೆ ಶಕ್ತನಾಗಿದ್ದನು (22:5).[18] ಮೂಲಪಿತೃವಿನ ಮನಸ್ಸಿನಲ್ಲಾದರೋ, ದೇವರ ವಾಗ್ದಾನವು ಖಚಿತವಾಗಿತ್ತು ಮತ್ತು ಇಸಾಕನು ಸತ್ತವರೊಳಗಿಂದ ಎಬ್ಬಿಸಲ್ಪಡುವನು ಎಂಬ ಸೂಚ್ಯಾರ್ಥವನ್ನ ಹೊಂದಿತ್ತು.

ಅದೇ ರೀತಿಯಲ್ಲಿಯೇ, ಯೇಸು ಕ್ರಿಸ್ತನು ದೇವರ ವಾಗ್ದಾನ ನೆರವೇರಿಕೆಯ ರೂಪದಲ್ಲಿ ಸತ್ತವರೊಳಗಿಂದ ಪುನರುತ್ಥಾನಗೊಂಡಿದ್ದು ಅಪೊಸ್ತಲಿಕ ಸುವಾರ್ತೆಗೆ ತಳಹದಿಯಾಗಿತ್ತು (ಅಪೊಸ್ತಲರ ಕೃತ್ಯಗಳು 13:32, 33), ಮತ್ತು ಅದು ನಿಜವಾದ ವಿಶ್ವಾಸಿಗಳಿಗೆ ನಿತ್ಯಜೀವದ ಖಾತ್ರಿಯನ್ನು ನೀಡುವದಾಗಿತ್ತು (ಅಪೊಸ್ತಲರ ಕೃತ್ಯಗಳು 13:48). ಈ ಕಾರಣದಿಂದಲೇ ಆದಿಯಲ್ಲಿನ ಕ್ರೈಸ್ತ ರಕ್ತಸಾಕ್ಷಿಗಳು ದೇವರಿಗೆ ವಿವರಣೆಗಳನ್ನು ಕೊಡುವಂತೆ ಕೇಳಲಿಲ್ಲ; ಬದಲಾಗಿ, ಅವರು ಆರಾಧನೆ ಮಾಡುತ್ತಾ ಮತ್ತು ಸಂಕೀರ್ತನೆಗಳನ್ನು ಹಾಡುತ್ತಾ ರೋಮನ್ನರ ಕ್ರೀಡಾಂಗಣಗಳಲ್ಲಿ ಮರಣಿಸಿದರು. ಮರಣವು ಅಂತ್ಯವಲ್ಲ ಎಂಬುದು ಅವರಿಗೆ ಗೊತ್ತಿತ್ತು, ಪೌಲನು ಹೇಳಿದಂತೆ, “ಬದುಕುವದಂದರೆ ಕ್ರಿಸ್ತನೇ, ಸಾಯುವದು ಲಾಭವೇ” (ಫಿಲಿಪ್ಪಿ 1:21). ಯೇಸುವು ಮರಣದ ಮೇಲೆ ಜಯಗೊಂಡವನಾಗಿ ಹೊರಹೊಮ್ಮಿ

ಪರಲೋಕಾರೋಹಣಗೊಂಡ ಪ್ರಕಾರವೇ, ಅವನ ಮೂಲಕವಾಗಿ, ನಂಬಿಕೆಯಿಂದ ತಾವೂ ಆತನ ವಾಗ್ದಾನಕ್ಕನುಗುಣವಾಗಿ ಮಹಿಮೆಕರವಾದ ಪುನರುತ್ಥಾನದಲ್ಲಿ ಪಾಲುಗಾರರಾಗುವೆವೆಂದು ಅವರು ಬಲ್ಲವರಾಗಿದ್ದರು (1 ಥೆಸಲೋನಿಕ 4:13–18; 1 ಯೋಹಾನ 2:25; 3:1–3). ಈ ವಿಧವಾದ ನಂಬಿಕೆಯೇ "ಲೋಕವನ್ನು" ಜಯಿಸುವಂಥ "ಜಯ" ಆಗಿರುತ್ತದೆ (1 ಯೋಹಾನ 5:4, 5).

*ಪರೀಕ್ಷೆಯ ಸಮಯಗಳಲ್ಲಿ, ವಿಶ್ವಾಸಿಗಳು ಕರ್ತನ ಒದಗಿಸುವಿಕೆಗಳ ಮೇಲೆ ಮುಖ್ಯಗಮನವನ್ನು ಕೊಟ್ಟು ಅವುಗಳ ಮೇಲೆ ಅವಲಂಭಿತರಾಗತಕ್ಕದ್ದು* (22:6–14). ವಾಕ್ಯವು ಪರೀಕ್ಷೆಯ ಮಹತ್ವಪೂರ್ಣತೆಯನ್ನು ತೋರಿಸಿ ಕೊಡುವಂಥ ಎರಡು ಹೇಳಿಕೆಗಳನ್ನು ದಾಖಲಿಸುತ್ತದೆ. ಮೊದಲನೆಯದಾಗಿ, ಇಸಾಕನು ಬೆಂಕಿ ಮತ್ತು ಕಟ್ಟಿಗೆಗಳನ್ನು ನೋಡಿದಾಗ, ಆತನು ತನ್ನ ತಂದೆಗೆ ಹೀಗೆ ಹೇಳಿದನು, "... ಹೋಮಕ್ಕೆ ಬೇಕಾದ ಕುರಿ ಎಲ್ಲಿ." ಅದಕ್ಕೆ ಅಬ್ರಹಾಮನ ಪ್ರತ್ಯುತ್ತರವು ಹೀಗಿತ್ತು, "ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು" (22:7, 8). ವೃದ್ಧನಾಗಿದ್ದ ಮೂಲಪಿತೃವಿನ ಜೀವನದ ಈ ಹಂತದಲ್ಲಿ, ಆತನಿಗೆ ದೇವರು ಆಜ್ಞಾಪಿಸಿದ್ದ ದಾರಿಯನ್ನು ಬಿಟ್ಟರೆ ಬೇರೆ ಇನ್ನಾವುದೇ ಉತ್ತಮ ದಾರಿಯಿರುತ್ತದೆಂದು ಅದರ ಹಿಂದೆ ಇನ್ನು ಹೋಗುವವನಾಗಿರಲಿಲ್ಲ, ಆದರೆ ಆತನ ಯೋಜನೆಯಲ್ಲಿಯೇ ಭರವಸವಿಟ್ಟಿದ್ದನು. ಅವನು "ನಂಬಿಕೆಗೆ ವಶವಾಗುವದಕ್ಕಾಗಿ ಕಾವಲಲ್ಲಿ ಮುಚ್ಚಲ್ಪಟ್ಟಿದ್ದನು" (ಗಲಾತ್ಯ 3:23); ಅಬ್ರಹಾಮನು ದೇವರ ಮನುಷ್ಯನಾಗಿರಬೇಕೆಂದರೆ ಇಸಾಕನನ್ನು ಯಜ್ಞಮಾಡಬೇಕೆಂಬ ಆಜ್ಞೆಗೆ ವಿಧೇಯನಾಗುವದರಿಂದ ತಪ್ಪಿಸಿಕೊಳ್ಳಲು ದಾರಿಯೇ ಇರಲಿಲ್ಲ.

ನಾನು ಒಬ್ಬ ಬಾಲಕನಾಗಿದ್ದ ವೇಳೆ, "ಮೋಜಿನ ಮನೆ" ಗೆ ಹೋಗುವದನ್ನು ಸಂತೋಷ ಪಡುತ್ತಿದ್ದೆನು, ಅದೊಂದು ಪ್ರವೇಶದ್ವಾರಗಳ ಬಲೆಯಾಗಿದ್ದು ಜಾತ್ರೆಯ ಆಕರ್ಷಣೆಯಾಗಿತ್ತು. ಕವಲು ದಾರಿಗಳು ವಿವಿಧ ದಿಕ್ಕುಗಳಲ್ಲಿ ಸಾಗುತ್ತಿದ್ದನು, ಸಾಮಾನ್ಯವಾಗಿ ದಾರಿಯಿಲ್ಲದ ಸ್ಥಳಕ್ಕೆ ಬಂದು ನಿಲ್ಲುತ್ತಿತ್ತು; ನಿರ್ಗಮನದ ಕಡೆಗೆ ಹೋಗಲು ಒಂದೇ ಒಂದು ದಾರಿ ಮಾತ್ರವೇ ಇರುತ್ತಿತ್ತು. ಅದು ತಪ್ಪಾದ ತಿರುವುಗಳನ್ನು ಅನ್ವೇಷಿಸುವ ಮತ್ತು ಅಂಥ ಗೋಜಲು ಹಾದಿಗಳಲ್ಲಿ ಹೊರಗೆ ಬರುವ ದಾರಿಯನ್ನು ಕಂಡುಕೊಳ್ಳುವುದು ಹತಾಶೆ ಮತ್ತು ಸಂತೋಷ ಎರಡನ್ನೂ ಉಂಟು ಮಾಡುತ್ತಿತ್ತು. ಅಬ್ರಹಾಮನು ತನ್ನ ಜೀವಿತದಲ್ಲಿ ಅನೇಕ ತಪ್ಪು ದಾರಿಗಳ್ಲಿ ತಿರುಗಿಕೊಂಡಿದ್ದನು; ಇವುಗಳು ಸಹ ಆ ದಾರಿಗಳಂತೇ ಹತಾಶೆಯುಂಟು ಮಾಡುವಂಥವುಗಳಾಗಿದ್ದವು, ಆದರೆ ಅವುಗಳು ಸಂತೋಷ ಪಡುವಂಥವುಗಳಾಗಿರಲಿಲ್ಲ. ಆತನು ದೇವರಿಗೆ ಏಕೆ ವಿಧೇಯನಾಗಬೇಕೆಂದು ಕಾರಣಗಳನ್ನು ಹುಡುಕುತ್ತಿರುವ ಪ್ರತಿ ಸಾರಿಯೂ, ಆತನ ಪರಿಸ್ಥಿತಿಯು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಿತ್ತು. ಆತನು ಈ ಅಂತಿಮ ಪರೀಕ್ಷೆಯನ್ನು ಸಮೀಪಿಸಿದಾಗ, ಮೂಲಪಿತೃವು ಪುನಃ ತನ್ನ ಮುಂದೆ ದೇವರು ಇಟ್ಟಿರುವ ದಾರಿಗಿಂತಲೂ ಉತ್ತಮವಾದ ಬೇರೊಂದು ದಾರಿಯು ಇರುತ್ತದೋ ಎಂದು ಚಕಿತಗೊಂಡಿರಬಹುದು. ಆತನು ತನ್ನೊಳಗೆ ಹೀಗಂದುಕೊಂಡಿರಬಹುದು, "ನಾನು ನನ್ನ ಮಗನನ್ನು ಕೊಲ್ಲುವದಾದರೆ ಅದು ಭೂಲೋಕದ ಸಕಲ ಜನಾಂಗಗಳಿಗೆ ಆಶೀರ್ವಾದವನ್ನುಂಟು ಮಾಡಲಿರುವ ನನ್ನ ಭವಿಷ್ಯದ ವಂಶಕ್ಕಾಗಿರುವ ನಿರೀಕ್ಷೆಗಳನ್ನು ಮತ್ತು ಕನಸುಗಳನ್ನು ಅಂತ್ಯಗೊಳಿಸಿದಂತಾಗುವದಿಲ್ಲವೋ?" ಬಹುಶಃ ಆತನು ಹೀಗೆ ಸಹ ವಾದಿಸಿಕೊಂಡಿರಬಹುದು, "ದೇವರು ನನಗೆ ಒಳ್ಳೇವನಾಗಿದ್ದಾನೆ, ಅನೇಕ ದಾರಿಗಳಲ್ಲಿ - ಶಾರೀರಿಕವಾಗಿ ಮತ್ತು ಆತ್ಮೀಕವಾಗಿ - ನನ್ನನ್ನು ಆಶೀರ್ವದಿಸಿದ್ದಾನೆ, ವಿಶೇಷವಾಗಿ ವಾಗ್ದಾನದ ಮಗನಾಗಿರುವ ಇಸಾಕನನ್ನು ಕೊಟ್ಟು ಆಶೀರ್ವದಿಸಿದ್ದಾನೆ! ಆತನ ಆಜ್ಞೆಗೆ

ಅವಿಧೇಯನಾಗುವ ಮೂಲಕ ನಾನು ಹೇಗೆ ಆತನನ್ನು ನಿರಾಶೆಗೊಳಿಸಲು ಸಾಧ್ಯ?"

ನಿಶ್ಚಯವಾಗಿಯೂ, ಅಬ್ರಹಾಮನ ಜೀವಿತದಲ್ಲಿ ಇದೊಂದು ನಿರ್ಣಾಯಕವಾದ ಕ್ಷಣವಾಗಿತ್ತು. ಈ ಸಂದಿಗ್ಧತೆಯನ್ನು ಯಾವ ಮಾನವ ತಾರ್ಕಿಕತೆಯೂ ಪರಿಹರಿಸಲಾಗಲಿಲ್ಲ. ತರ್ಕದ ದೃಷ್ಟಿಕೋನದಿಂದ ನೋಡುವಾಗ, ದೇವರಿಗೆ ವಿಧೇಯವಾಗುವದಾಗಲಿ ಅಥವಾ ಅವಿಧೇಯವಾಗುವದಾಗಲಿ ತಪ್ಪು ಎಂದು ಕಾಣಿಸುತ್ತಿತ್ತು. ಆತನು ನಿರ್ಣಯ ಮಾಡಬೇಕಾದ ಕ್ಷಣದಲ್ಲಿ, ಆತನು ನಂಬಿಕೆಯ ದ್ವಾರದ ಮುಖಾಂತರವಾಗಿ ಪ್ರವೇಶಿಸಿದನು. ದ್ವಾರದ ಆಚೆಯ ಕಡೆಯಲ್ಲಿ ಏನಿದೆ ಎಂಬುದು ಅವನಿಗೆ ನೋಡಲು ಸಾಧ್ಯವಿರಲಿಲ್ಲವಾದರೂ, ಒಳ್ಳೇವನು ಮತ್ತು ನ್ಯಾಯಯುಳ್ಳವನು ಆಗಿರುವ ದೇವರು ಈತನ ಬುದ್ಧಿಯ ಗೋಜಲು ದಾರಿಗಳ ನಿರ್ಗಮನ ದ್ವಾರದ ಬಳಿಯಲ್ಲಿ ಕಾದುಕೊಂಡಿದ್ದನು ಎಂಬುದನ್ನು ಆತನು ತಿಳಿದಿದ್ದನು. ನಿಜವಾಗಿಯೂ, ಅವನ ನಂಬಿಕೆ *ದೇವರಲ್ಲಿಟ್ಟ ಭರವಸವಾಗಿತ್ತು.*

ಅಬ್ರಹಾಮನು ಯೆಹೋವನಲ್ಲಿ ಏಕ ಸತ್ಯದೇವರೆಂದು ನಂಬಿಕೆಯಿಟ್ಟದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು "ತನ್ನನ್ನು ಹುಡುಕುವವರಿಗೆ ಪ್ರತಿಫಲ ಕೊಡುವವನು" (ಇಬ್ರಿಯ 11:6) ಎಂದು ಸಹ ವಿಶ್ವಾಸಿದನು. ದೇವರ ಸಂಗಡ ಅಷ್ಟೊಂದು ವರ್ಷಗಳ ಕಾಲ ನಡೆದ ನಂತರದಲ್ಲಿ, ಮೂಲಪಿತೃವು ಆತನನ್ನು ಚೆನ್ನಾಗಿ ಅರಿತುಕೊಂಡವನಾಗಿದ್ದನು. "ನಾನು ನನ್ನ ಮಗನನ್ನು ಕೊಂದರೂ, ಯೆಹೋವನು ಆತನನ್ನು ಸತ್ತವರೊಳಗಿಂದ ಎಬ್ಬಿಸುವನು ಮತ್ತು ಆಗಲೂ ತನ್ನ ವಾಗ್ದಾನಗಳನ್ನು ನೆರವೇರಿಸುವನು" ಎಂದು ತನ್ನೊಳಗೆ ಹೇಳಿಕೊಳ್ಳುವದಕ್ಕೆ ಸಾಕಾಗುವಷ್ಟು ವಿಶ್ವಾಸವನ್ನು ಆತನು ಯೆಹೋವನಲ್ಲಿ ಇಟ್ಟಿದ್ದನು (ನೋಡಿರಿ ಇಬ್ರಿಯ 11:19).

ದೇಹದ ಪುನರುತ್ಥಾಣದ ಭಾವನೆಯ ಕುರಿತಾಗಿ ಅಬ್ರಹಾಮನು ಏನನ್ನು ಅರ್ಥಮಾಡಿಕೊಂಡನೆಂಬುದು ನಮಗೆ ತಿಳಿಯದು, ಯಾಕೆಂದರೆ ಆ ವಿಷಯದ ಕುರಿತಾಗಿ ಅಷ್ಟೊಂದು ಆರಂಭಿಕ ದಿನಾಂಕದ ಬಗ್ಗೆ ನಿರ್ದಿಷ್ಟವಾದ ಮಾಹಿತಿಯನ್ನು ಬೈಬಲ್ ಒದಗಿಸುವದಿಲ್ಲ. ಪ್ರಾಚೀನ ಜನರಿಗೆ ಸಮಾಧಿಯ ಆಚೆಗೂ ಜೀವನವು ಮುಂದುವರೆಯುತ್ತದೆಂದು ನಂಬಿದ್ದರು ಎಂಬುದಂತೂ ನಮಗೆ ಗೊತ್ತಿರುತ್ತದೆ. ಆ ಕಾರಣದಿಂದಲೇ ಅವರು ಮರಣಿಸಿದ ತಮ್ಮ ಪ್ರಿಯರನ್ನು ಮರಣಾನಂತರದ ಜೀವಿತಕ್ಕೆ ಉಪಯುಕ್ತವೆಂದು ತಮಗೆ ಅನ್ನಿಸಿದ ವಸ್ತುಗಳೊಂದಿಗೆ ಹೂಣಿಡುತ್ತಿದ್ದರು. ಒಂದು ಅರ್ಥದಲ್ಲಿ, ಅಬ್ರಹಾಮನು ಇಸಾಕನನ್ನು ಈಗಾಗಲೇ ಮರಣದಿಂದ ಎದ್ದು ಬಂದವನಂತೆ ಕಂಡನು; ಮೊದಲ ಬಾರಿಗೆ ಅದು ಮೃತಗೊಂಡಿದ್ದ ಸಾರಳ ಗರ್ಭದಿಂದ ಆಗಿತ್ತು. ಆದದರಿಂದ, ದೇವರು ಅವನನ್ನು ಎರಡನೆಯ ಸಾರಿ, ಮೋರಿಯ ಬೆಟ್ಟದಲ್ಲಿರುವ ಯಜ್ಞವೇದಿಯಿಂದ ಎಬ್ಬಿಸಬಲ್ಲನು ಎಂದು ನಂಬಿದನು.

ಈ ದೃಢವಿಶ್ವಾಸದೊಂದಿಗೆ, ದೇವರು ತನಗೆ ಅಪ್ಪಣೆ ಕೊಟ್ಟ ರೀತಿಯಲ್ಲಿಯೇ, ಮೂಲಪಿತೃವು ತನ್ನ ಮಗನನ್ನು ತೂರಿಸುವದಕ್ಕಾಗಿ ಕತ್ತಿಯನ್ನು ಮೇಲಕ್ಕೆ ಎತ್ತಿದ್ದನು - ಆದರೆ "ಯೆಹೋವನ ದೂತನು" ಅವನನ್ನು ತಡೆದಿದ್ದನು (22:11). ಅಬ್ರಹಾಮನು ದೇವರ ವಾಗ್ದಾನಗಳು ಹಾಗೂ ಒದಗಿಸುವಿಕೆಗಳಲ್ಲಿ ಮುಖ್ಯಗಮನವನ್ನು ಮತ್ತು ವಿಶ್ವಾಸವನ್ನು ಇಟ್ಟಿದ್ದನಾದ್ದರಿಂದ ಈ ಚಲನೆಗಳನ್ನು ಹಾಯ್ದು ಹೋಗುವಂತೆ ಮಾಡಿಕೊಳ್ಳಲು ಶಕ್ತನಾಗಿದ್ದನು. ಯಜ್ಞ ಮಾಡದಂತೆ ಅವನ ಕೈಯನ್ನು ತಡೆದಾಗ, ಮೂಲಪಿತೃವು ಕಣ್ಣೆತ್ತಿ ನೋಡಿದನು ಮತ್ತು ಯೆಹೋವನು ಇಸಾಕನ ಬದಲಾಗಿ ಬೇರೆ ಪ್ರಾಣಿಯೊಂದನ್ನು ಒದಗಿಸಿದ್ದಾನೆ ಎಂಬುದನ್ನು ಗ್ರಹಿಸಿಕೊಂಡನು. ಒಂದು ಪೊದೆಯಲ್ಲಿ ಒಂದು "ಟಗರು" (ಗಂಡು ಕುರಿ) ಸಿಕ್ಕಿಕೊಂಡಿರುವದನ್ನು ಕಂಡನು (22:13). ಕೃತಜ್ಞತೆಯುಳ್ಳವನಾಗಿ, ಆತನು ಆ ಸ್ಥಳಕ್ಕೆ "ಯೆಹೋವನು ಒದಗಿಸುವನು"

ಎಂದು ಹೆಸರಿಟ್ಟನು. ಇಸ್ರಾಯೇಲ್ಯರು ಇಂದಿನ ವರೆಗೂ "ಯೆಹೋವನ ಬೆಟ್ಟದಲ್ಲಿ ಒದಗುವದು" ಎಂಬದಾಗಿ ಹೇಳುತ್ತಿರುತ್ತಾರೆಂದು ಮೋಶೆಯು ವರದಿ ಮಾಡುತ್ತಾನೆ (22:14).

ದೇವರು, ಅಬ್ರಹಾಮ, ಇಸಾಕ, ಮತ್ತು ಟಗರಿನ ಕುರಿತಾದ ಇಡೀ ಕಥನವು ದೇವರು ತನ್ನ ಮಹಾ ಪ್ರೀತಿಯ ನಿಮಿತ್ತದಿಂದ ಗೋಲ್ಗಥಾದಲ್ಲಿ ಯೇಸುವಿನ ಮೂಲಕವಾಗಿ ಮಾನವರಿಗಾಗಿ ಮಾಡಿದ ಕಾರ್ಯಕ್ಕೆ ಸಾಂಕೇತಿಕ ಛಾಯೆ[19]/ಪ್ರತಿಮಾದರಿಯಾಗಿ ನಿಲ್ಲುತ್ತದೆ (ಯೋಹಾನ 3:16). ಈ ಸಾದೃಶ್ಯವನ್ನು ಅರ್ಥಮಾಡಿಕೊಳ್ಳಬೇಕಾದರೆ, ಒಂದು ಅಂಗಿಗೆ ನಮೂನೆಯು ಹೇಗೋ ಒಂದು "ಛಾಯೆ" ಯು ಹಾಗೆಯೇ ಒಂದು "ಪ್ರತಿಮಾದರಿ" ಗೆ ಆಗಿರುತ್ತದೆ. ಒಂದು ನಮೂನೆಯು ಅದರಿಂದ ರೂಪಿಸಲ್ಪಟ್ಟಿರುವ ಅಂಗಿಯೊಂದಿಗೆ ಸಂಬಂಧ ಹೊಂದಿದೆ; ಕೆಲವೊಂದು ಸ್ಪಷ್ಟವಾದ ಸಾಮ್ಯತೆಗಳಿರುತ್ತವೆ. ಇನ್ನೊಂದು ಕಡೆಯಲ್ಲಿ, ಅವುಗಳ ಬಹಳ ಅಸಾಮ್ಯತೆಯುಳ್ಳವುಗಳು ಆಗಿರುತ್ತವೆ, ಬೇರೆ ಬೇರೆ ಸಾಮಗ್ರಿಯಿಂದ ತಯಾರಿಸಲ್ಪಟ್ಟಿರುತ್ತವೆ. ನಮೂನೆಯು ಒಟ್ಟುಗೂಡಿಸದೆ ಇರುವಂಥದ್ದು; ಅಂಗಿಯು ಯಾವ ರೂಪವನ್ನು ಪಡೆಯಲಿದೆ ಎಂಬುದಕ್ಕೆ ಒಂದು ಪೂರ್ಣವಲ್ಲದ ಪೂರ್ವನೋಟವನ್ನು ಒದಗಿಸುವ ತುಂಡುಗಳ ಒಂದು ಸಂಗ್ರಹವಾಗಿರುತ್ತದೆ. ಸ್ವತಃ ಅಂಗಿಯು ನಯವಾದ ಬಟ್ಟೆಯಿಂದ ಜಾಗರೂಕವಾದ ಪ್ರಖರತೆಯೊಂದಿಗೆ ಮಾಡಲ್ಪಡುವ ಕೆಲಸದಿಂದ ಹೋಲಿಯಲ್ಪಡುತ್ತದೆ, ಅದನ್ನು ಅಗ್ಗವಾದ ಕಾಗದಿಂದ ತಯಾರಿಸಲ್ಪಟ್ಟಿರುವ ನಮೂನೆಗಿಂತಲೂ ಎಷ್ಟೋ ಹೆಚ್ಚು ಬಾಳಿಕೆ ಬರುವಂತೆ ಮತ್ತು ದುಬಾರಿಗೊಳಿಸುತ್ತದೆ. ಈ ಗುಣಸ್ವಭಾವಗಳನ್ನು ಮನಸ್ಸಿನಲ್ಲಿಟ್ಟುಕೊಂಡವರಾಗಿ, ನಾವು ಇಸಾಕನ ಕುರಿತಾದ ಬೈಬಲ್ ಕಥನಗಳಲ್ಲಿರುವ ಛಾಯೆ/ಪ್ರತಿಮಾದರಿ ಕುರಿತು ಆಲೋಚಿಸೋಣ.

ಮೊದಲ ಸಾಮ್ಯತೆಯು ಇಸಾಕ ಮತ್ತು ಯೇಸುವಿನ ಅದ್ಭುತಕರವಾದ ಜನನಗಳಿಗೆ ಸಂಬಂಧಿಸಿದ್ದಾಗಿದೆ. ಇಸಾಕನ ಜನನವು ಅಬ್ರಹಾಮ ಮತ್ತು ಸಾರಳ ವೃದ್ಧಾಪ್ಯದ ದೇಹಗಳಿಗೆ ವೀರ್ಯವತ್ತತೆಯನ್ನು ತುಂಬಿ, ಸಂತಾನೋತ್ಪತ್ತಿಯನ್ನು ಮತ್ತು ಗರ್ಭಧರಿಸುವಿಕೆಯನ್ನು ಶಕ್ತಗೊಳಿಸಿದ ದೇವರ ಶಕ್ತಿಯಿಂದಾಗಿ ಸಾಧ್ಯವಾಗಿತ್ತು (ರೋಮಾ 4:18, 19). ಪ್ರಾಮುಖ್ಯವಾಗಿರುವ ವ್ಯತ್ಯಾಸವು ಏನೆಂದರೆ ಮರಿಯಳು ಕನ್ಯೆಯಾಗಿದ್ದಳು ಮತ್ತು ಪವಿತ್ರಾತ್ಮನು ಆಕೆಯ ಮೇಲೆ ಇಳಿದು ಬಂದಾಗ ಗರ್ಭಧಾರಣೆಯು ಉಂಟಾಗಿತ್ತು; ಆದದರಿಂದ, ಯೇಸುವಿಗೆ ಶಾರೀರಿಕ ತಂದೆಯು ಇರಲಿಲ್ಲ (ಮತ್ತಾಯ 1:18, 25).

ಎರಡನೆಯ ಸಾಮ್ಯತೆಯು ಏನೆಂದರೆ ದೇವರು ಇಸಾಕನಿಗೆ ಬದಲಾಗಿ ಅರ್ಪಿಸಲ್ಪಡುವಂತೆ ಒಂದು ಟಗರನ್ನು (ಗಂಡು ಕುರಿ) ಒದಗಿಸಿದ್ದನು, ಆ ಇಸಾಕನು ಮರಣಿಸುವದಕ್ಕೆ ಅರ್ಹನಾಗಿರಲಿಲ್ಲ; ಆದದರಿಂದ, ಅವನು ಬದುಕುವದನ್ನು ಮುಂದುವರೆಸುವದಕ್ಕೆ ಶಕ್ತನಾಗಿದ್ದನು. ದೇವರು ಮರಣಕ್ಕೆ ಯೋಗ್ಯರಾಗಿದ್ದ ಪಾಪಿಗಳಿಗೋಸ್ಕರ ಪ್ರಾಯಶ್ಚಿತ್ತ ಯಜ್ಞವಾಗುವಂತೆ (ರೋಮಾ 3:23-25; 1 ಯೋಹಾನ 2:1, 2) ಯೇಸು ಕ್ರಿಸ್ತನನ್ನು ("ದೇವರ ಕುರಿಮರಿ"; ಯೆಶಾಯ 53:7; ಯೋಹಾನ 1:29) ಒದಗಿಸಿ ಕೊಟ್ಟನು. ದೇವರ ಕೃಪೆಯಿಂದ, ಈ ಯಜ್ಞದಿಂದ ಪ್ರಯೋಜನವನ್ನು ಪಡೆಯಲು ಆಯ್ಕೆ ಮಾಡಿಕೊಂಡವರು ಮಗನಲ್ಲಿರುವಂಥ ನಿತ್ಯಜೀವವನ್ನು ಅನುಭವ ಮಾಡಬಲ್ಲರು (1 ಯೋಹಾನ 5:11).

ಸಂಬಂಧದ ಛಾಯೆ/ಪ್ರತಿಮಾದರಿಯ ಮೂರನೆಯ ಅಂಶವು ವಿಶಿಷ್ಟವಾದದ್ದು. ಅಬ್ರಹಾಮನು ಯಜ್ಞವೇದಿಯ ಮೇಲಿನಿಂದ ಇಸಾಕನನ್ನುಕೆಳಗೆ ಇಳಿಸಿ ಅದರ ಮೇಲೆ ಮರಣಿಸುವದಕ್ಕೆ ನಿರಪರಾಧಿ ಟಗರನ್ನು ಇಟ್ಟನು, ಆದರೆ ದೇವರು ಅದಕ್ಕಿಂತಲೂ ಎಷ್ಟೋ

ಶ್ರೇಷ್ಠವಾದದ್ದೊಂದನ್ನು ಮಾಡಿದನು: ಆತನು ಸ್ವತಃ ನರಾವತಾರವನ್ನೆತ್ತಿ ಯೇಸುವಿನ ರೂಪದಲ್ಲಿ ಭೂಮಿಗೆ ಬಂದನು (ಯೋಹಾನ 1:14, 18; 14:8-11). ಆತನು ಪಾಪ ಮಾಡದವನಾಗಿ ಮಾನವರ ಮಧ್ಯದಲ್ಲಿ ವಾಸಿಸಿದನು ಮತ್ತು ಬಳಿಕ ತನ್ನ ಯಜ್ಞವೇದಿಯಾದ ಶಿಲುಬೆಯ ಮೇಲೆ ಪಾಪಭರಿತ ಮಾನವರೆಲ್ಲರ ಸ್ಥಾನವನ್ನು ತಾನೇ ವಹಿಸಿಕೊಂಡನು (ನೋಡಿರಿ ಎಫೆಸ 2:16; ಕೊಲೊಸ್ಸೆ 1:19, 20; ಇಬ್ರಿಯ 13:12; 1 ಪೇತ್ರ 2:24). ಸತ್ಯವಾಗಿಯೂ, ಶಿಲುಬೆಗೇರಿಸಲ್ಪಡುವಿಕೆಯು ಸಹ ದೇವರ ಜೀವಿತದಲ್ಲಿ ಒಂದು ಘಟನೆಯಾಗುತ್ತು, ಯಾಕೆಂದರೆ ಆತನು ಆ ಸಂಧಾನ ಮಾಡಿಕೊಳ್ಳುವ ಅನುಭವದೊಳಗೆ "ಕ್ರಿಸ್ತನಲ್ಲಿದ್ದನು" (2 ಕೊರಿಂಥ 5:19, 21). ಶಿಲುಬೆಯು "ಲೋಕ" ಕ್ಕೆ ಬಿದ್ದುಹೋಗಿರುವ ಮಾನವರಿಗಾಗಿ ಸೃಷ್ಟಿಕರ್ತನು ಹೊಂದಿರುವ ಪ್ರೀತಿಯ (ಯೋಹಾನ 3:16; 1 ಯೋಹಾನ 3:1) "ಎಷ್ಟು ಮಹತ್ತಾದದ್ದೆಂದು" ತೋರಿ ಬಂದಿತು (ಎಫೆಸ 1:18-20).

---

## ಅಡಿಟಿಪ್ಪಣಿಗಳು

[1]G. Gerleman, "נסה," in *Theological Lexicon of the Old Testament*, trans. Mark E. Biddle, ed. Ernst Jenni and Claus Westermann (Peabody, Mass.: Hendrickson Publishers, 1997), 2:741–42. [2]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 402. [3]ಇದು ಹೊಸ ಒಡಂಬಡಿಕೆಲ್ಲಿ *monogenēs* ಎಂಬುದರ ಸರಿಯಾದ ಅರ್ಥವಾಗಿದೆ. (Walter Bauer, *A Greek-English Lexicon of the New Testament and Other Early Christian Literature*, 3d ed., rev. and ed. Frederick William Danker [Chicago: University of Chicago Press, 2000], 658.) ಯೇಸುವಿಗೆ ಸಂಬಂಧಿಸಿದಂತೆ ಗ್ರೀಕ್ ಭಾಷೆಯ ಪದದ ಒಂದು ಉತ್ತಮವಾದ ಅನುವಾದಕ್ಕಾಗಿ, ನೋಡಿರಿ ಯೋಹಾನ 1:14, 18; 3:16, 18; 1 ಯೋಹಾನ 4:9 (NIV; NRSV). [4]ಇಸಾಕನ ಯಜ್ಞವು ದೇವಾಲಯದ ಬೆಟ್ಟದೊಂದಿಗೆ ಸಂಬಂಧ ಹೊಂದಿರುವದನ್ನು ತಿಳಿಯಲು, ನೋಡಿರಿ Josephus *Antiquities* 7.13.4; *Jubilees* 18.13. [5]G. Lloyd Carr, "עָלָה," in *TWOT*, 2:666–68. [6]*Genesis Rabbah* 56.3. [7]ಸಂಭಾವ್ಯವಾಗಿ, ಇದೊಂದು ಉರಿಯುವ ದೀವಿಟಿಗೆ ಅಥವಾ ಒಂದು ಹೊಳೆಯು ಕರಿಗೆಂಡ ಆಗಿತ್ತು. [8]ಈ ಕೆಳಗಿನವುಗಳನ್ನು ಹೋಲಿಕೆ ಮಾಡಿರಿ: "ಯಾಕೋಬನೇ, ಯಾಕೋಬನೇ" (46:2), "ಮೋಶೆಯೇ, ಮೋಶೆಯೇ" (ವಿಮೋಚನಕಾಂಡ 3:4), "ಸಮುವೇಲನೇ! ಸಮುವೇಲನೇ!" (1 ಸಮುವೇಲ 3:10), ಮತ್ತು "ಸೌಲನೇ, ಸೌಲನೇ" (ಅಪಪೊಸ್ತಲರ ಕೃತ್ಯಗಳು 9:4). [9]22:2ರ ಮೇಲಿನ ವ್ಯಾಖ್ಯೆಗಳಲ್ಲಿ ತಿಳಿಸಿರುವ ಪ್ರಕಾರ, *ಯಾಚೆಡ್* ಎಂಬುದರ ಅರ್ಥವು ಇಸಾಕನು ಅಬ್ರಹಾಮನ "ಒಬ್ಬನೇ ವಿಶಿಷ್ಟ ಮಗ" ಆಗಿದ್ದನು. [10]ಪ್ರಳಯವನ್ನು ರಭಸವಾಗಿ ಬರಮಾಡುತ್ತಿದ್ದಂಥ ಮನುಷ್ಯನ ಕೆಟ್ಟತನ ನಿಮಿತ್ತ ದೇವರ ಹೃದಯದಕ್ಕಾದ ವೇದನೆ ಹಾಗೂ ಒಡೆಯುವಿಕೆಯನ್ನು ತಿಳಯಲು 6:5, 6 ವಚನಗಳನ್ನು ನೋಡಿರಿ.

[11]NASBಯಲ್ಲಿ "ಛಾಯೆ" ಎಂಬುದು παραβολή (*ಪಾರಾಬೊಲೇ*) ಎಂಬುದರಿಂದ ಅನುವಾದಿಸಲ್ಪಟ್ಟಿರುತ್ತದೆ, ಅದು ಅನೇಕ ಸಾರಿ "ಪಾರಾಬಲ್" ಎಂದು ಲಿಪ್ಯಂತರಣಗೊಳಿಸಲ್ಪಡುತ್ತದೆ. ಅದ ರೂಪಕ ಸ್ವಭಾವವು NIVಯಲ್ಲಿ "ಸಾದೃಶ್ಯರೂಪದಲ್ಲಿ ಹೇಳುವದಾದರೆ" ಎಂದು ಅನುವಾದಿಸಲ್ಪಟ್ಟಿರುತ್ತದೆ. [12]ರೆಬೆಕ್ಕಳ ಕುಟುಂಬವು ಆಕೆಯ ಮೇಲೆ 24:60ರಲ್ಲಿ ಅದೇ ವಿಧವಾದ ಆಶೀರ್ವಾದವೊಂದನ್ನು ಉಚ್ಛರಿಸಿತ್ತು. [13]Edwin C. Hostetter, "Bethuel (Person)," in *The Anchor Bible Dictionary*, ed. David Noel Freedman (New York: Doubleday, 1992), 1:715. [14]Allen C. Myers, "Concubine," in *The International Standard Bible Encyclopedia*, ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:758. [15]Kenneth A. Mathews, *Genesis 11:27–50:26*, The New American Commentary, vol. 1B (Nashville: Broadman & Holman Publishers, 2005), 310. [16]ಇಬ್ರಿಯ ಪದವು נָסָה (*ನಾಸಾಹ*), ಮತ್ತು ಇದಕ್ಕೆ ಸಮಾನವಾದ ಗ್ರೀಕ್ ಪದವು πειράζω (*ಪೆರಿಯಾಜೋ*). [17]ಆರಂಭಿಕ ಕಾಲದ ವಿಶ್ಲೇಷಣಕಾರರು ಮೂಲಪಿತೃಗಳ ಯುಗವನ್ನು ಒಂದು "ನಕ್ಷತ್ರ ಬೆಳಕಿನ ಯುಗ," ಮೋಶೆಯ ಯುಗವನ್ನು "ಚಂದ್ರ ಬೆಳಕಿನ ಯುಗ," ಮತ್ತು ಕ್ರೈಸ್ತೀಯ ಯುಗವನ್ನು "ಮಂದ ಬೆಳಕಿನ ಯುಗ" ಎಂಬುದಾಗಿ ಕರೆಯುತ್ತಿದ್ದರು. (Alexander Campbell, "The Jewish Age-No. XIV: The Ministry of John," in *The Christian Baptist* 7 [3 May 1830]: 222.) [18]ಆರಾಧನೆಯು ಒಬ್ಬನ ಭಾವ ಹೇಗಿರುತ್ತದೆ ಎಂಬುದರ ವಿಷಯವಲ್ಲ; ಅದು ಒಬ್ಬ ವ್ಯಕ್ತಿಯು ತನಗೆ

ಯಾವ ವೈಯಕ್ತಿಕ ಭಾವಗಳು ಇದ್ದರೂ ಸರಿಯೇ ದೇವರನ್ನು ಗೌರವಿಸಿ ಮಹಿಮೆ ಪಡಿಸಬೇಕೆಂದು ಆತನು ಮಾಡುವ ಒಂದು ತೀರ್ಮಾನ ಆಗಿರುತ್ತದೆ (ನೋಡಿರಿ ಯೋಬ 1:20, 21). [19]NASBಯು ಇಬ್ರಿಯ 9:9; 11:19ರಲ್ಲಿ παραβολή (*ಪಾರಾಬೊಲೇ*, "ಸಾಮ್ಯ") ಅನುವಾದಿಸುವದಕ್ಕೆ "ಒಳಗಣ ಅರ್ಥ" ಮತ್ತು "ಇದ್ದವನಂತೆ" ಎಂಬ ಪದಗಳನ್ನ ಬಳಸುತ್ತದೆ. (ನೋಡಿ Bauer, 759.)